ಕಲ್ಯಾಣ ಕರ್ನಾಟಕದ ಪ್ರತಿಬಿಂಬ......

ವಿಜಯನಗರ ಜಿಲ್ಲಾ ಆವೃತ್ತಿ

# ವಾರ್ತಾ ಲೋಕ

"VARTHA LOKA" Kannada Daily Morning News Paper, VIJAYNAGAR. Dist.: Vijaynagar

ಕನ್ನಡ ದಿನಪತ್ರಿಕೆ

ಕೊಪ್ಪಳ | ರಾಯಚೂರು | ಬಳ್ಳಾರಿ | ವಿಜಯನಗರ | ಯಾದಗಿರಿ | ಬೆಂಗಳೂರು | ಬೀದರ ಹಾಗೂ ಕಲಬುರ್ಗಿ ಜಿಲ್ಲೆಯಲ್ಲಿ ಏಕಕಾಲಕ್ಕೆ ಪ್ರಕಾಶಿತ

ಸಂಪಾದಕರು: ಎಸ್. ವಿ. ಕುಲಕರ್ಣಿ ಜಿ.

ಸ್ಥಾನಿಕ ಸಂಪಾದಕರು: ಮೊಹಮ್ಮದ ಜಿಲಾನ ಜಿ.

ವಾರ್ತಾ ಲೋಕ
ಕನ್ನಡ ದಿನ ಪತ್ರಿಕೆ ಕಛೇರಿ
ರಾಜಾಸಾಬ ಕಂಪೌಂಡ್,
ಕುಲಾಯಪ್ಪ ಬಿಲ್ಡಿಂಗ್
ಎದುರುಗಡೆ, 1ನೇ ಕ್ರಾಸ್
ಪಟೇಲ್ ನಗರ,
ಹೊಸಪೇಟೆ
ಮೊ.ನಂ : 9482156289

E-mail ID : varthalokahpt@gmail.com

VOLUME : 01 | ISSUE : 281 | Sunday 30-03-2025 | RNI No.: KARKAN/2010/47633 | Page : 4+II | Mob. No. : 9482156289 | Price : ₹3/-

# ಬಿಎಸ್‌ವೈ ವಿರುದ್ಧ ಯತ್ನಾಳ್ ವಾಗ್ದಾಳಿ

**ಬೆಂಗಳೂರು :** ಬಿಜೆಪಿಯಿಂದ ಎರಡನೇ ಉಚ್ಚಾಟನೆಗೊಂಡ ಬಳಿಕವೂ ಮಾಜಿ ಮುಖ್ಯಮಂತ್ರಿ ಬಿ.ಎಸ್ ಯಡಿಯೂರಪ್ಪ ವಿರುದ್ಧ ಶಾಸಕ ಬಸನಗೌಡ ಪಾಟೀಲ್ ಯತ್ನಾಳ್ ವಾಗ್ದಾಳಿ ಮುಂದುವರಿಸಿದ್ದಾರೆ. ಜನರು ಹೊಸ ಪಕ್ಷ ಕಟ್ಟಲು ಸಲಹೆ ಕೊಡ್ತಿದ್ದಾರೆ ಅಂತ ಬಾಂಬ್ ಸಿಡಿಸಿದ್ದಾರೆ.
ಸುದ್ದಿಗಾರೊಂದಿಗೆ ಮಾತನಾಡಿದ ಅವರು ಯಡಿಯೂರಪ್ಪ ಅವರ ಮಗ ಒತ್ತಡ ತಂದು ನನ್ನ ಉಚ್ಚಾಟನೆ ಮಾಡಿಸಿದ್ದಾರೆ. ಯಾವ ವೀರಶೈವ ಲಿಂಗಾಯತರು ಯಡಿಯೂರಪ್ಪ ಜೊತೆಗಿಲ್ಲ.ಭ್ರಮೆಯಿಂದಕೇಂದ್ರನಾಯಕರು ಹೊರಗೆ ಬರಬೇಕು ಎಂದಿದ್ದಾರೆ. ರಾಮಾಯಣ, ಮಹಾಭಾರತದಲ್ಲೂ ಅಪಮಾನ ಮಾಡಿರೋದಿದೆ. ಹಾಗಾಗಿ ನನಗೆ ಯಾವ ಮುಜುಗರವೂ ಇಲ್ಲ. ಯಡಿಯೂರಪ್ಪ ಕುಟುಂಬವನ್ನು ಹೊರಗೆ ಇಡೋವರೆಗೂ ಬಿಡೋದಿಲ್ಲ ಅಂತ ಶಪಥ ಮಾಡಿದ್ದಾರೆ.

ಸರ್ವನಾಶ ಆಗ್ತಾರೆ: ಯತ್ನಾಳ್ ಭವಿಷ್ಯ
ಉಚ್ಚಾಟನೆ ಮಾಡಿದವರು ಇದಕ್ಕೆ ಕಾರಣಕರ್ತರಾದವರು ನಾಶ ಆಗ್ತಾರೆ ಎಂದು ಬಸನಗೌಡ ಯತ್ನಾಳ್ ಭವಿಷ್ಯ ನುಡಿದಿದ್ದಾರೆ. ಜನಮೆಚ್ಚಿದ ನಾಯಕ ಯಾರೂ ಇಲ್ಲ. ವಿಜಯೇಂದ್ರ ಸೇರಿ ಯಾರಿಗೂ 3 ಜನ ಸೇ–ರಿಸೋ ಯೋಗ್ಯತೆ ಇಲ್ಲ. ಆದ್ರೆನಾನು ಬಾಡಿಗೆ ಜನ ತಂದಿಲ್ಲ. ವಿಜಯಪುರದಲ್ಲಿ ಬಾಡಿಗೆ ಕೊಟ್ಟು ಕರೆಸಿಲ್ಲ. ಕಳೆದ ಚುನಾವಣೆಯಲ್ಲಿ ಸಿಟಿ ರವಿಯನ್ನು ತನ್ನ ಚೇಲಾ ನಿಲ್ಲಿಸಿ ಯಡಿಯೂರಪ್ಪ ಸೋಲಿಸಿದ ಅಂತ ಯತ್ನಾಳ್ ಮಾರ್ಮಿಕವಾಗಿ ನುಡಿದಿದ್ದಾರೆ.

## ದಮ್ಮೂರ: ಶ್ರೀ ಭೀಮಾಂಬಿಕಾದೇವಿ ಮಠದಲ್ಲಿ 372 ನೇ ಶಿವಾನುಭವ ಗೋಷ್ಠಿ

# ದುರಿತ ಕರ್ಮವ ನೊಲ್ಲದಿರು ಪುಣ್ಯವನೆ ಮಾಡು

● ವಾರ್ತಾಲೋಕ ವಾರ್ತೆ

**ಯಲಬುರ್ಗಾ: ಮಾರ್ಚ್ 29 :** ಧರ್ಮದ ಕಾರ್ಯದಲ್ಲಿ ಪ್ರತಿನಿತ್ಯ ತೊಡಗಿದಾಗ ಜೀವನದಲ್ಲಿ ಪುಣ್ಯದ ಫಲ ದೊರೆಯಲು ಸಾಧ್ಯ ಎಂದು ಶಿಕ್ಷಕ ಸಕ್ರಪ್ಪ ಕುಟ್ರು ಅವರು ದುರಿತ ಕರ್ಮವ ನೊಲ್ಲದಿರು ಪುಣ್ಯವನೆ ಮಾಡು ಎಂಬ ವಿಷಯವಾಗಿ ಯಲಬುರ್ಗಾ ತಾಲೂಕಿನ ದಮ್ಮೂರ ಗ್ರಾಮದ ಶ್ರೀ ಭೀಮಾಂಬಿಕಾ ದೇವಿ ಮಠದಲ್ಲಿ ಚತುರ್ದಶಿ ಅಂಗವಾಗಿ ಮಾ.28 ರಂದು ಹಮ್ಮಿಕೊಂಡಿರುವ 372 ನೇ ಶಿವಾನುಭವಗೋಷ್ಠಿಯಲ್ಲಿ ಮುಖ್ಯ ಅತಿಥಿಯಾಗಿ ಮಾತನಾಡಿ. ಧರ್ಮದ ಹಾದಿಯಲ್ಲಿ ಸಾಗಬೇಕು ಎಂದರು. ಧರ್ಮರಮಠದ ಹನುಮಂತಪ್ಪಜ್ಜ ಹಾಗೂ ಶರಣಯ್ಯ ಹಿರೇಮಠ ಸಾನಿಧ್ಯ ವಹಿಸಿದ್ದರು. ಮಕ್ಕಳಿಗೆ ಉತ್ತಮ ಶಿಕ್ಷಣದ ಜೋತೆಗೆ ಸಂಸ್ಕಾರ ಸಂಸ್ಕೃತಿಯ ಮಾರ್ಗದರ್ಶನ




ನೀಡಬೇಕು ಅಂದಾಗ ಮಕ್ಕಳು ನಮ್ಮ ಜೋತೆ ಪ್ರೀತಿಯಿಂದ ಇರಲು ಸಾದ್ಯ ಮತ್ತು ಅವರು ಬದುಕು ಸುಂದರವಾಗಲು ಸಾದ್ಯ ಎಂದು ಚಿಕ್ಕ ಮ್ಯಾಗೇರಿ ಗ್ರಾಮ ಪಂಚಾಯತಿ ಅದ್ಯಕ್ಷ ಶರಣುಕುಮಾರ ಅಮರಗಟ್ಟಿ ಅವರು ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡಿದರು. ಪಾಪದ ಕೆಲಸಗಳಿಂದ ದೂರವಿದ್ದು ಪುಣ್ಯದ ಕಾರ್ಯದಲ್ಲಿ ಸಾಗಬೇಕು,ಸಿರಿತನಬಂದವರುಹಣ,ಧವಸ ಧ್ಯಾನಗಳನ್ನು ನೀಡಿ ಪುಣ್ಯದ ಕಾರ್ಯ ಮಾಡುತ್ತಾರೆ ಆದರೆ ಹಣ ಇಲ್ಲದವರು ರಕ್ತದಾನ,ಅನ್ನದಾನ,ನೀರಿನದಾನ,ಸಂಗೀತ ಸೇವೆ ದಾನ, ಬೇಸಿಗೆ ದಿನದಲ್ಲಿ ಮೂಕ ಪಶು ಪಕ್ಷಿಗಳಗೆ ನೀರೂಣಿಸುವ ಸಮಾಜ ಸೇವೆ ಮಾಡುವದು ,ಈ ರೀತಿಯಾಗಿ ಸಮಾಜಮುಖಿ ಯಾಗಿ ಮಾಡುವ ಕಾರ್ಯದಿಂದ ಪುಣ್ಯ ಲಭಿಸುತ್ತದೆ ಎಂದು ಶ್ರೀ ಭೀಮಾಂಬಿಕಾ ದೇವಿ ಶಿವಾನುಭವ ಸೇವಾ ಸಮಿತಿ ಅಧ್ಯಕ್ಷ ಶರಣಬಸಪ್ಪ, ದಾನಕ್ಕೆ ಅವರು ಅಧ್ಯಕ್ಷತೆ ವಹಿಸಿ ಮಾತನಾಡಿದರು. ಈ ವೇಳೆ ಪ್ರಾಸ್ತಾವಿಕವಾಗಿ ಗುರುಮೂರ್ತಿ ಬಡಿಗೇರ, ದುರಗೇಶ ಹರಿಜನ, ಬಸವರಾಜ ಜಂಬಾಳಿ,ಭೀಮಣ್ಣಹವಳಿಮಾತನಾಡಿದರು. ಈ ವೇಳೆ ಶರಣಪ್ಪ ಬಳಿಗೇರಿ, ಈರಪ್ಪ ರಾವಣಕಿ,ಇಬ್ರಾಹಿಂ ಸಾಬ ವಾಲಿಕಾರ, ಶರಣೆಗೌಡ ದ್ಯಾಮನಗೌಡ್ರ,ಗಣೇಶ ನಿಡಗುಂದಿ, ಶಕ್ರಪ್ಪ ಇಟಗಿ ಸೇರಿದಂತೆ ಇತರರು ಇದ್ದರು. ಸಂಗೀತ ಸೇವೆಯನ್ನು ಕಾಳೇಶ ಕಮ್ಮಾರ, ನೀಲಕಂಠಪ್ಪ ರೋಡ್ಡರ, ಕಳಕಪ್ಪ ಹಡಪದ,ಯಮನೂರಪ್ಪ ಹಳ್ಳಿಕೇರಿ ಊರಿನ ಮುಖಂಡರು ಯುವಕ ಮಿತ್ರರು ಸೇರಿದಂತೆ ಇತರರು ಇದ್ದರು.ನಂತರ ಅನ್ನಸಂತರ್ಪಣೆ ಜರುಗಿತು.

**ವರದಿ ಮಂಗಳೇಶ ಮೆತಗಲ್**

# ಪಕ್ಷಿಗಳ ನೀರಡಿಕೆಗೆ ಜನರ ಪ್ರೀತಿಯೇ ಆಸರೆ: ವೀರಮ್ಮ ಅಭಿಪ್ರಾಯ



● ವಾರ್ತಾಲೋಕ ವಾರ್ತೆ

**ಕೂಡ್ಲಿಗಿ : ಮಾರ್ಚ್ 29 :** ಗಿಡ ಮರಗಳನ್ನು ಕಡಿದು ಪ್ರಾಣಿ ಪಕ್ಷಿಗಳ ಸಂಕುಲಕ್ಕೆ ಅನನೂಕೂಲ ಮಾಡದೆ ಪ್ರಕೃತಿ ಸಂಪತ್ತು ಕಾಪಾಡುವುದು ಪ್ರತಿಯೊಬ್ಬರ ಕರ್ತವ್ಯ ಎಂದು ಸಪ್ತಗಿರಿ ಜ್ಞಾನ ವಿಕಾಸ ಕೇಂದ್ರದ ಸದಸ್ಯೆ ವೀರಮ್ಮ ನವರು ಅಭಿಪ್ರಾಯಪಟ್ಟರು.
ಕೂಡ್ಲಿಗಿ ತಾಲೂಕು ಹುರುಳಿಹಾಳ್ ಗ್ರಾಮದಲ್ಲಿ ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ವತಿಯಿಂದ ಹಮ್ಮಿಕೊಂಡಿದ್ದ ಪ್ರಾಣಿ ಪಕ್ಷಿಗಳಿಗೆ ಗುಟುಕು ನೀರಿನ ಅರವಟಿಗೆ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡಿದರು.
ಈ ಬಿರು ಬೇಸಿಗೆ ಕಾಲದಲ್ಲಿ ಮೂಕ ಪ್ರಾಣಿ ಪಕ್ಷಿಗಳಿಗೆ ಅನುಕೂಲವಾಗಲು ಗಿಡಮರಗಳಲ್ಲಿ ನೀರಿನ ವ್ಯವಸ್ಥೆ ಮಾಡಬೇಕು. ಸಾರ್ವಜನಿಕರು ಸಮರ್ಪಕವಾಗಿ ನೀರು ಹಾಕಿ ನಿರ್ವಹಣೆ ಮಾಡಿ ಪಕ್ಷಿ ಸಂಕುಲಕ್ಕೆ ಅನುಕೂಲ ಮಾಡುವಂತೆ ಮನವಿ ಮಾಡುವಂತೆ ಸಲಹೆ ನೀಡಿದರು.
ಸೇವಾ ಪ್ರತಿನಿಧಿ ಅನಿತಾ ಮಾತನಾಡಿ, ಶ್ರೀ ಕ್ಷೇತ್ರ ಧರ್ಮಸ್ಥಳದ ಪೂಜ್ಯರ ಹಾಗೂ ಮಾತೃಶ್ರೀ ಅಮ್ಮನವರ ಮಾರ್ಗದರ್ಶನದಂತೆ ಮೂಕ ಪಕ್ಷಿಗಳಿಗೆ ನೀರುಣಿಸುವ ಮಹತ್ಕಾರ್ಯಕ್ಕೆ ಕೊಪ್ಪಳ ಪ್ರಾದೇಶಿಕ ನಿರ್ದೇಶಕರು,ಜಿಲ್ಲಾನಿರ್ದೇಶಕರುಹಾಗೂತಾಲೂಕು ಯೋಜನಾ ಅಧಿಕಾರಿಗಳು ತಾಲೂಕಿನ ನಮ್ಮೆಲ್ಲ ಕಾರ್ಯಕರ್ತರಿಗೆಮಾರ್ಗದರ್ಶನದಮೇರೆಗೆಇಂದು ನಾವು ಈ ಕಾರ್ಯಕ್ರಮ ಮಾಡಿರುವುದು ನಮಗೆ ಸಂತಸ ತಂದಿದೆ.ಅದೇರೀತಿ ಪರಿಸರ ಸಂರಕ್ಷಣೆಗೆ ಸಾರ್ವಜನಿಕರ ಸಹಕಾರ ಅಗತ್ಯವಾಗಿದೆ ಗ್ರಾಮದ ಮನೆಗಳ ಮುಂದೆ ಹಾಗೂ ಸುತ್ತಮುತ್ತಲಿನ ಲ್ಲಿರುವ ಗಿಡ ಮರಗಳಲ್ಲಿ ಮೂಕ ಪಕ್ಷಿಗಳಿಗಾಗಿ ಕುಡಿಯುವ ನೀರಿನ ವ್ಯವಸ್ಥೆ ಮಾಡಿ ಬಾಯಾರಿದ ಬಾನಾಡಿಗಳಿಗೆ ದಾಹ ತೀರಿಸುವ ಕಾರ್ಯಕ್ಕೆ ನಾವೆಲ್ಲರೂ ಕೈ ಜೋಡಿಸಿ ಜನರಲ್ಲಿ ಜಾಗೃತಿ ಮಾಡೋಣ ಎಂದರು.
ಈ ಸಂದರ್ಭದಲ್ಲಿ ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯ ಜ್ಞಾನ ವಿಕಾಸ ಕೇಂದ್ರದ ಸಮನ್ವಯಾಧಿಕಾರಿರೇಖಾನೀರಲಕೇರಿ,ಸಪ್ತಗಿರಿಜ್ಞಾನ ವಿಕಾಸ ಕೇಂದ್ರದ ಮಂಜುಳಾ,ವೀರಮ್ಮ,ಕೊಟ್ರಮ್ಮ, ನೇತ್ರಾ,ಹಾಲಮ್ಮ,ಶಹೀನಾಭೀ,ತಸ್ಲೀಮಾಭಾನು,ರಮೀಜಾ,ಮುರ್ಷಧ್ ಭೀ,ಹೀನಕೌಸರ್, ವಿಎಲ್ಇ ಮಹಾಲಕ್ಷ್ಮಿ ಸೇರಿದಂತೆ ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದರು.




# ಪಟ್ಟಣ ಪಂಚಾಯಿತಿಯ 2025–26 ಸಾಲಿನ ಆಯ–ವ್ಯಯ(ಬಜೆಟ್) ಮಂಡನೆ



● ವಾರ್ತಾಲೋಕ ವಾರ್ತೆ

**ಕೊಟ್ಟೂರು : ಮಾರ್ಚ್ 29 :** ಪಟ್ಟಣ ಪಂಚಾಯಿತಿಯ 2025–26 ಸಾಲಿನ ಆಯ–ವ್ಯಯ(ಬಜೆಟ್) ಬದ್ದಿ ರೇಖಾ ರಮೇಶ ಅಧ್ಯಕ್ಷತೆಯಲ್ಲಿ ಪ್ರಥಮ ಬಜೆಟ್ ಯಶಸ್ವಿಯಾಯಿತು.
ಪಟ್ಟಣ ಪಂಚಾಯಿತಿಯ 2025–26ನೇ ಸಾಲಿನ ಆಯ–ವ್ಯ ಯವು ಉಪಾಧ್ಯಕ್ಷ ಜಿ.ಸಿದ್ದಯ್ಯ ಸ್ಥಾಯಿ ಸಮಿತಿ ಅಧ್ಯಕ್ಷರು ಹೆಚ್.ಆಂಜೀನಮ್ಮ ವಿರುಪಾಕ್ಷಪ್ಪ ಹಾಗೂ ಸರ್ವ ಸದಸ್ಯರುಗಳಿಂದ ಅನುಮೋದನೆ ಪಡೆದಿದ್ದು, ಸರ್ವರೂ ಲೆಕ್ಕ ಪತ್ರದ ಮಿನಿ ಪುಸ್ತಕವನ್ನು ಬಿಡುಗಡೆ ಮಾಡಿದರು.
ಪಟ್ಟಣ ಪಂಚಾಯಿತಿ ಮುಖ್ಯಾ ಧಿಕಾರಿ ಎ.ನಸರುಲ್ಲಾ ಅವರು ಆರಂಭಿಕ ರೂ.ಒಟ್ಟು 10,16,52,505 ಜಮಾಗಳು 29,84,72,760 ರೂ.,ಒಟ್ಟು 3 40,01,25,265 5. ಖರ್ಚುಗಳು 29,74,68,360 ರೂ.ಅಂತಿಮ 10,26,56,905 5.
ರೂ ಉಳಿತಾಯ ಬಜೆಟ್ 10,04,400 ಪ್ರಸ್ತುತದ ಬಜೆಟ್‌ಗೆ ಸಭೆಯಲ್ಲಿ ಸಮ್ಮತಿ ದೊರೆತಿದೆ ಎಂದು ಪತ್ರಿಕೆಗೆ ತಿಳಿಸಿದರು.

**ವರದಿ ಪರಶುರಾಮ್**

# ಸುರಪುರದ ಶರಣರ ರಥೋತ್ಸವ

● ವಾರ್ತಾಲೋಕ ವಾರ್ತೆ

**ಸುರಪುರ :ಮಾರ್ಚ್ 29 :** ಸುರಪುರ ಪಟ್ಟಣದ ಶಟ್ಟಿ ಮೊಹಲ ದಲ್ಲಿ ಇರುವ ಶರಣಬಸವೇಶ್ವರರ ಜಾತ್ರಾ ಮಹೋತ್ಸವವು,ದಿನಾಂಕ30–3–2025 ರಂದು ರವಿವಾರ ಬೆಳಿಗ್ಗೆ ಬಸವಣ್ಣನಿಗೆ ವಿಶೇಷ ಅಭಿಷೇಕ ಪ್ರಾರಂಭವಾಗುತ್ತದೆ, ಪೂಜಾ ಕಾರ್ಯಕ್ರಮದ ನೇತೃತ್ವವನ್ನು ದೇವಸ್ಥಾನದ ಅರ್ಚಕರಾದ ಶರಣಯ್ಯ ಸ್ವಾಮಿ ಮಠಪತಿ ಇವರ ಕುಟುಂಬದ ಮುಖ್ಯಸ್ಥರಿಂದ ನೆರವೇರಿಸಲಾಗುವುದು, ಈ ಜಾತ್ರೆವು ವಿಶೇಷತೆ:–ಪ್ರಾಚೀನಕಾಲದಆಟವಾದ ಪಣಿ ಚಂಡು, ಆಟ ಜರಗುವುದು, ಈ ಆಟವನ್ನು ನೋಡುವುದೇ ಒಂದು ಸೊಗಸು, ಸಾಯಂಕಾಲ 6 ಗಂಟೆಗೆ ಸುಮಾರಿಗೆ ದೇವಸ್ಥಾನದಿಂದ ಪಾದಗಟ್ಟೆಯವರಿಗೆ ಭಕ್ತಾದಿಗಳು ತೇರು ಹೇಳುವ ಮೂಲಕ, ತಮ್ಮ ಭಕ್ತಿಯನ್ನು ಪರಕಾಷ್ಟೆಯನ್ನುಮೆರೆಯುವವರು ಈ ಜಾತ್ರೆಯಲ್ಲಿ ಸುರಪುರ ಪಟ್ಟಣದ ಸಕಲ ಭಕ್ತಾದಿಗಳು ಹಾಗೂ ಸುತ್ತಮುತ್ತಲಿನ ಗ್ರಾಮದ ಜನರು ಈ ಒಂದು ಜಾತ್ರೆಯಲ್ಲಿ ಪಾಲ್ಗೊಳ್ಳುತ್ತಾರೆ.

**ವರದಿ:– ಸಿದ್ರಾಮ ಬೇವಿನಮಟ್ಟಿ**



# ದಿ. 2 ರಂದು ನೂತನ ಪ್ರಧಾನ ಕಚೇರಿಯ ಕಟ್ಟಡದ ಉದ್ಘಾಟನೆ

**ಜಮಖಂಡಿ :** ಜಮಖಂಡಿ ಅರ್ಬನ್ ಕೋ ಆಪ ಬ್ಯಾಂಕಿನ ನೂತನ ಪ್ರಧಾನ ಕಚೇರಿಯ ಕಟ್ಟಡದ ಉದ್ಘಾಟನೆ ಸಮಾರಂಭ ಬುದವಾರ 02/04/2025 ರಂದು ಮಧ್ಯಾಹ್ನ 12-00ಕ್ಕೆ ಕೊಲ್ಲಾಪುರದ ಕನೇರಿಮಠದ ಪರಮಪೂಜ್ಯ ಶ್ರೀ ಅದೃಶ್ಯ ಕಾಡ ಸಿದ್ದೇಶ್ವರ ಮಹಾಸ್ವಾಮಿಗಳ ಇವರ ದಿವ್ಯ ಸಾನಿಧ್ಯದಲ್ಲಿ

ಸಾನಿಧ್ಯಶ್ರೀ ಷ ಬ್ರ ಶಿವಲಿಂಗ ಪಂಡಿತರಾಧ್ಯ ಶಿವಾಚಾರ್ಯ ಮಹಾಸ್ವಾಮಿಗಳು ಮುತ್ತಿನ ಕಂತಿ ಹಿರೇಮಠ ಜಮಖಂಡಿ, ಪರಮ ಪೂಜ್ಯ ಶ್ರೀ ಹರ್ಷಾನಂದ ಮಹಾಸ್ವಾಮಿಗಳು ಸಿದ್ದೇಶ್ವರ ಆಶ್ರಮ ಹಲ್ಯಾಳ , ಶ್ರೀ ಷ ಭ್ರ ಗೌರಿಶಂಕರ ಶಿವಾಚಾರ್ಯ ಮಹಾಸ್ವಾಮಿಗಳು ಕಲ್ಯಾಣ ಮಠ ಜಮಖಂಡಿ.

ಮಾನ್ಯಉಪಮುಖ್ಯಮಂತ್ರಿಗಳಾದ ಸನ್ಮಾನ್ಯ ಶ್ರೀ ಡಿ.ಕೆ ಶಿವಕುಮಾರ ಇವರು ಹಸ್ತದಿಂದ ನೂತನ ಕಟ್ಟಡ ಉದ್ಘಾಟನೆ ಸಮಾರಂಭ ನೆರವೇರಿಸಲಿದೆ, ಸನ್ಮಾನ್ಯ ಶ್ರೀ ಎಚ್. ಕೆ ಪಾಟೀಲ್ ಪ್ರವಾಸೋದ್ಯಮ ಸಚಿವರು, ದಿ. ಶ್ರೀ. ಅಪ್ಪಾರವ ಶಿಂಧೆ ಪುತ್ಥಳಿ ಅನಾವರಣಗೊಳಿಸುವರು, ಅಬಕಾರಿ ಹಾಗೂ ಜಿಲ್ಲಾ ಉಸ್ತುವಾರಿ ಸಚಿವರಾದ ಸನ್ಮಾನ್ಯ ಶ್ರೀ ಆರ್ ಬಿ ತಿಮ್ಮಾಪುರ ಅವರು ಸಭಾಭವನ ಉದ್ಘಾಟಿಸುವರು, ಅಥಣಿಶಾಸಕಹಾಗೂಮಾಜಿಉಪ ಮುಖ್ಯಮಂತ್ರಿಗಳಾದ ಸನ್ಮಾನ್ಯ ಶ್ರೀ ಲಕ್ಷ್ಮಣ ಸವದಿ ಅವರಿಂದ ಸಹಕಾರ ಧ್ವಜಾರೋಹಣ ನೆರವೇರಿಸಲಿದೆ.

ಬೃಹತ್ ಹಾಗೂ ಮಾಧ್ಯಮ ಕೈಗಾರಿಕಾ ಸಚಿವರಾದ ಸನ್ಮಾನ್ಯ ಶ್ರೀ ಎಂ.ಬಿ ಪಾಟೀಲ ಅವರು ಆಡಳಿತಕಚೇರಿಉದ್ಘಾಟಿಸುವರು, ಮಾನ್ಯ ಜವಳಿ ಸಕ್ಕರೆ ಮತ್ತು ಕೃಷಿ ಮಾರುಕಟ್ಟೆ ಸಚಿವರಾದ ಸನ್ಮಾನ್ಯ ಶ್ರೀ ಶಿವಾನಂದ ಪಾಟೀಲ ಅವರು ಶಾಖೆ ಉದ್ಘಾಟಿಸುವರು, ಬಾಗಲಕೋಟ ಲೋಕಸಭೆ ಸದಸ್ಯರಾದ ಪಿ.ಸಿ ಗದ್ದಿಗೌಡರಿಂದ ನಾಮಫಲಕಗಳು ಅನಾವರಣ ಮಾಡಲಿದ್ದು ಬಾಗಲಕೋಟ ಲೋಕಸಭಾ ಸದಸ್ಯರಾದ ರಮೇಶ ಜಿಗಜಿನಗಿ ಸೇಫ್ ಲಾಕರ್ ಉದ್ಘಾಟಿಸುವರು, ಆಡಳಿತ ಮಂಡಳಿ ಸದಸ್ಯರ ಸಭಾಭವನವನ್ನು ಗುಲ್ಬರ್ಗ ಲೋಕಸಭೆ ಸದಸ್ಯ ಶ್ರೀ ರಾಧಾಕೃಷ್ಣ ದೊಡ್ಡಮನಿ ಅವರು ನೆರವೇರಿಸಲಿದ್ದಾರೆ, ರಾಜ್ಯಸಭಾ ಸದಸ್ಯರಾದ ಶ್ರೀ ನಾರಾಯಣ ಸಾ ಬಾಂಡಗೆ ಅವರಿಂದ ನಿರ್ವಹಣಾ ಮಂಡಳಿ ಸದಸ್ಯರ ಸಭಾಭವನ ಉದ್ಘಾಟಿಸಲಿದ್ದಾರೆ, ಮುಖ್ಯ ಅತಿಥಿಗಳಾಗಿ ಶಾಸಕ ಜಗದೀಶ ಗುಡುಗುಂಟಿ, ಶಾಸಕ ಸಿದ್ದು ಸವದಿ, ಶಾಸಕ ವಿಜಯಾನಂದ ಕಾಶಪ್ಪನವರ, ವಿಧಾನ ಪರಿಷತ್ ಸದಸ್ಯ ಪ್ರಕಾಶ ಹುಕ್ಕೇರಿ, ವಿಧಾನ ಪರಿಷತ್ ಸದಸ್ಯ ಹನುಮಂತ ನಿರಾಣಿ, ವಿಧಾನ ಪರಿಷತ್ ಸದಸ್ಯ ಪಿ.ಎಚ್ ಪೂಜಾರ, ಮಾಜಿ ಸಚಿವ ಎಸ್ ಆರ್ ಪಾಟೀಲ, ಮಾಜಿ ಶಾಸಕ ಆನಂದ ನ್ಯಾಮಗೌಡ, ಶಾಸಕಜಿ.ಟಿಪಾಟೀಲಶಾಸಕಎಚ್ ವೈ ಮೇಟಿ, ಶಾಸಕ ಭೀಮಸೇನ ಚಿಮ್ಮನಕಟ್ಟಿ, ವಿಧಾನ ಪರಿಷತ ಸದಸ್ಯೆ ಶ್ರೀಮತಿ ಉಮಾಶ್ರೀ, ವಿಧಾನಪರಿಷತ ಸದಸ್ಯ ಸುನಿಲ ಗೌಡ ಪಾಟೀಲ ಬಾಗಲಕೋಟೆ ಡಿಸಿಸಿ ಬ್ಯಾಂಕಿನ ಅಧ್ಯಕ್ಷರಾದ ಅಜಯಕುಮಾರ ಸರನಾಯಕ ಮಾಜಿ ಶಾಸಕರಾದ ಮುರುಗೇಶ ನಿರಾಣಿ ಮಾಜಿ ಶಾಸಕ ಶ್ರೀಕಾಂತ ಕುಲಕರ್ಣಿ ಹಾಗೂ ಸಹಕಾರ ಸಂ ಸಂ ನಿಬಂಧಕರಾದ ಡಾ. ಸುರೇಶ ಗೌಡ ಬೆಳಗಾವಿ ಸಹಕಾರ ಸಂ ಸಂ ನಿಬಂಧಕರಾದ ದಾನಯ್ಯ ಹಿರೇಮಠ ಬಾಗಲಕೋಟೆ ಆಗಮಿಸಲಿದ್ದು.

ಅರ್ಬನಬ್ಯಾಂಕಿನಅಧ್ಯಕ್ಷರಾಹುಲ ಎಸ್‌ಕಲೂತಿಇವರಅಧ್ಯಕ್ಷತೆಯಲ್ಲಿ ನೂತನ ಕಟ್ಟಡದ ಉದ್ಘಾಟನಾ ಸಮಾರಂಭ,ನಿರ್ದೇಶಕಮಂಡಳಿ ಸಮೂಹದೊಂದಿಗೆ ಜರುಗಲಿದೆ.

# ತೆಲಂಗಾಣಕ್ಕೆ ನೀರು: ಮಾಹಿತಿ ಒದಗಿಸಲು ಆಗ್ರಹ

## ರೈತ ಸಂಘದಿಂದ 6 ದಿನಗಳ ಗಡುವು: ಉಪವಾಸ ಸತ್ಯಾಗ್ರಹದ ಎಚ್ಚರಿಕೆ

**ವರದಿ:ಲಾಲಸಾಬ ಸವಾರಗೋಳ**



**ಆಲಮಟ್ಟಿ:** ತೆಲಂಗಾಣಕ್ಕೆ ನಾರಾಯಣಪುರ ಜಲಾಶಯದಿಂದ ಹರಿಸಿದ ನೀರಿನ ನಿಖರ ಹಾಗೂ ಲಿಖಿತ ಮಾಹಿತಿ ನೀಡಬೇಕು. ಜನವರಿಯಿಂದ ಮಾರ್ಚ್ ಅಂತ್ಯದವರೆಗೂ ವಿಜಯಪುರ, ಬಾಗಲಕೋಟೆ ಜಿಲ್ಲೆಯ ರೈತರಿಗೆ ಕೃಷಿಗಾಗಿ ನೀರು ಹರಿಸಿದ ಮಾಹಿತಿ ಒದಗಿಸಬೇಕು' ಎಂದು ಆಗ್ರಹಿಸಿ ಅಖಂಡ ಕರ್ನಾಟಕ ರೈತ ಸಂಘದಿಂದ ಗುರುವಾರ ಪ್ರತಿಭಟನೆ ನಡೆಸಲಾಯಿತು.

ಇಲ್ಲಿನ ರಾಮಲಿಂಗೇಶ್ವರ ದೇವಸ್ಥಾನದಿಂದ ಮುಖ್ಯ ಎಂಜಿನಿಯರ್ ಕಚೇರಿಯವರೆಗೆ ಪ್ರತಿಭಟನಾ ಮೆರವಣಿಗೆ ನಡೆಸಿ, ಒಂದು ದಿನದ ಸಾಂಕೇತಿಕ ಧರಣಿ ನಡೆಸಿದ ರೈತರು, ಉಪ ಮುಖ್ಯ ಎಂಜಿನಿಯರ್ ಐ.ಎಲ್. ಕಳಸಾ, ಸೂಪರಿಂಟೆಂಡಿಂಗ್ ಎಂಜಿನಿಯರ್ಗಳಾದವಿ.ಎಸ್.ಹಿರೇಗೌಡರ ಹಾಗೂ ಗೋವಿಂದ ರಾಠೋಡ ಅವರಿಗೆ ಮನವಿ ಸಲ್ಲಿಸಿದರು.

ಸಂಘದ ರಾಜ್ಯ ಘಟಕದ ಪ್ರಧಾನ ಕಾರ್ಯದರ್ಶಿ ಅರವಿಂದ ಕುಲಕರ್ಣಿ ಮಾತನಾಡಿ, 'ಮುಳವಾಡ ಏತ ನೀರಾವರಿ ಯೋಜನೆಗೆ ಸಂಬಂಧಿಸಿದ ಸಂಕನಾಳ ಶಾಖಾ ಕಾಲುವೆಯಿಂದ ವಿತರಣಾ ಕಾಲುವೆ ನಿರ್ಮಿಸಿ, ಕಾನ್ನಾಳ, ಸಾಲವಾಡಗಿ, ಜಾಯವಾಡಗಿ, ಬ್ಯಾಕೋಡ, ಕಣಕಾಲ, ನರಸಲಗಿ ಗ್ರಾಮಗಳಿಗೆ ನೀರು ಪೂರೈಸಬೇಕು. ಈ ಎಲ್ಲಾ ಹಳ್ಳಿಗಳ ಜನ, ಜಾನುವಾರುಗಳಿಗೆ ಕುಡಿಯುವ ನೀರಿಗಾಗಿ ಮೂರ್ನಾಲ್ಕು ಕಿ.ಮೀ ಅಲೆದಾಡುವ ಸ್ಥಿತಿ ಬಂದಿದೆ. ಬಸವನಬಾಗೇವಾಡಿ ಶಾಖಾ ಕಾಲುವೆ ಹಾಗೂ ಕುದರಿಸಾಲವಾಡಗಿ ಮುಖ್ಯ ಕಾಲುವೆಗೆ ಕನಿಷ್ಠ 10 ದಿನಗಳ ಕಾಲ ನೀರು ಹರಿಸಬೇಕು. ಕಾಲುವೆಯ ಕೊನೆ ಅಂಚಿಗೂ ನೀರು ಹರಿಸಿ, ಕೆರೆಗಳ ಭರ್ತಿಗೆ ಕ್ರಮ ಕೈಗೊಳ್ಳಬೇಕು' ಎಂದರು.

ಆರು ದಿನದೊಳಗೆ ಮಾಹಿತಿ ನೀಡಿ: 'ಜ.1ರಿಂದ ಈವರೆಗೂ ತೆಲಂಗಾಣಕ್ಕೆ ಹರಿಸಿದ ನೀರಿನ ಲಿಖಿತ ಮಾಹಿತಿ ಒದಗಿಸಬೇಕು. ವಿಜಯಪುರ, ಬಾಗಲಕೋಟೆ ಅವಳಿ ಜಿಲ್ಲೆಯ ರೈತರಿಗೆ ಕೃಷಿಗಾಗಿ ಎಷ್ಟು ಟಿಎಂಸಿ ಅಡಿ ನೀರು ಹರಿಸಲಾಗಿದೆ? ಎಷ್ಟು ಕೆರೆಗಳನ್ನು ಭರ್ತಿ ಮಾಡಲಾಗಿದೆ ಎಂಬುದರ ಮಾಹಿತಿ ಲಿಖಿತವಾಗಿ ಆರು ದಿನದೊಳಗೆ ನೀಡಬೇಕು. ಇಲ್ಲದಿದ್ದರೆ ಮುಖ್ಯ ಎಂಜಿನಿಯರ್ ಕಚೇರಿ ಎದುರು ಉಪವಾಸ ಸತ್ಯಾಗ್ರಹ ಹಮ್ಮಿಕೊಳ್ಳಲಾಗುವುದು' ಎಂದು ಅರವಿಂದ ಕುಲಕರ್ಣಿ ಎಚ್ಚರಿಕೆ ನೀಡಿದರು.

ಉಮೇಶ ವಾಲೀಕಾರ, ವಿಠಲ ಬಿರಾದಾರ, ಗುರುಲಿಂಗಪ್ಪ ಪಡಸಲಗಿ, ಸಾಹೇಬಗೌಡ ಹೊಸೂರ, ಸಂಗನಗೌಡ ಹಿರೇಗೌಡರ, ಸುರೇಶಗೌಡ ಬಂಡಿ, ಶಿವಣ್ಣ ಆಲೂರ, ಸೋಮರಾಯ ಬಡಿಗೇರ, ಅಯ್ಯನಗೌಡ ಪಾಟೀಲ, ಸುರೇಶ ಹೊಲ್ಲೂರ, ಪವನಕುಮಾರ ಶಿಕಳವಾಡಿ, ಶಿವಣ್ಣ ಬಸಪ್ಪ ಆಲೂರ, ಶಂಕ್ರೆಪ್ಪ ನಾಟೀಕಾರ, ಪರಸುರಾಮ ಚಲವಾದಿ, ಬಸಪ್ಪ ಮಾದರ, ಯಲ್ಲಪ್ಪ ಹಾದಿಮನಿ, ಶ್ರೀಶೈಲ ನಾಗರೆಡ್ಡಿ ಇದ್ದರು.

# ಹುಟ್ಟಿ ಬೆಳೆದ ನಾಡಿದ ಸಂಸ್ಕೃತಿ ಉಳಿಸಿ ಬೆಳೆಸಿ



**ಸಾವಳಗಿ :** ನಾವು ಹುಟ್ಟಿ ಬೆಳೆದ ನಾಡಿನಲ್ಲಿ ಜನಪದ ಕಲೆ-ಸಂಸ್ಕೃತಿ, ಸಾಹಿತ್ಯ ಜೀವಂತವಾಗಿದ್ದು ಅದನ್ನು ಗುರುತಿಸಿ ಅದರ ಬಗ್ಗೆ ಮತ್ತಷ್ಟು ತಿಳಿದುಕೊಂಡು, ಅದನ್ನು ಮುಂದಿನ ಪೀಳಿಗೆಗೆ ಉಳಿಸಿ-ಬೆಳೆಸುವ ಕೆಲಸ ನಮ್ಮ ವಿದ್ಯಾರ್ಥಿಗಳು ಮಾಡಬೇಕು ಎಂದು ಕಾರ್ಯಕ್ರಮ ಅಧ್ಯಕ್ಷತೆವಹಿಸಿ ಮಾತನಾಡಿದ ಪ್ರಭಾರಿ ಪ್ರಾಂಶುಪಾಲ ವಸಂತ ಪಿ.ಎಸ್ ಹೇಳಿದರು.

ಚೆನ್ನಪ್ಪಣ್ಣ ನಿಂಗಪ್ಪಣ್ಣ ನಿರಾಣಿ ಸರಕಾರಿ ಪ್ರಥಮ ದರ್ಜೆ ಕಾಲೇಜ ಆವರಣದಲ್ಲಿ ಶುಕ್ರವಾರ ನಡೆದ ಐಕ್ಯೂಎಸಿ ಸಹಯೋಗದೊಂದಿಗೆ ಸಾಂಸ್ಕೃತಿಕಘಟಕದಿಂದಜಾನಪದ ಉತ್ಸವ-2025 ನಮ್ಮ ಸಂಸ್ಕೃತಿ-ನಮ್ಮ ಹೆಮ್ಮೆ ಕಾರ್ಯಕ್ರಮದಲ್ಲಿ ಮಾತನಾಡಿದರು.

ಸಾಲು ಸಾಲಾಗಿ ವಿದ್ಯಾರ್ಥಿಗಳು ಎತ್ತಿನ ಬಂಡಿಯೊಂದಿಗೆ ಗ್ರಾಮ ಪಂಚಾಯತ, ಕಲ್ಯಾಣ ಕಟ್ಟಿ ಮಾರ್ಗವಾಗಿ ಹಳೆ ಬಸ್ಸ ನಿಲ್ದಾಣ ಮೂಲಕ ಬ್ಯಾಂಜ್ಯೋ ಬಾರಿಸುತ್ತಾ ಜಾನಪದ ಸೋಗಡಿನ ನೃತ್ಯಗಳು ಪ್ರದರ್ಶನಗೊಂಡವು. ಉಪನ್ಯಾಸಕರು ಸಹ ಹಳ್ಳಿಯ ವೇಷ ಭೂಷಣದಲ್ಲಿ ಮಿಂಚಿದರು. ಕಾಲೇಜ ಆವರಣದಲ್ಲಿ ವಿದ್ಯಾರ್ಥಿಗಳು ಸಿದ್ದಪಡಿಸಿದ ಧಾನ್ಯಗಳ ರಾಶಿಗೆ ಸಂಪ್ರಾದಾಯಿಕವಾಗಿ ಪೂಜೆ ಸಲ್ಲಿಸಿದರು. ಇಳಕಲ್ ಸೀರೆ, ಗುಳೇದಗುಡ್ಡದ ಕುಬ್ಬಸ್ ತೊಟ್ಟು, ಮೂಗಿಗೆ ಮೂಗುತಿ ಧರಸಿ, ತುರುಬಿಗೆಹೂಮುಡಿದುಕೊಂಡು ಸಕತ್ತಾಗಿ ರೆಡಿಯಾಗಿ ಪೋಟೋಗೆ ಪೋಸ್‌ಕೊಟ್ಟವಿದ್ಯಾರ್ಥಿನಿಯರು ಒಂದೆಡೆಯಾದರೆ ಬಿಳಿ ಶರ್ಟ ಧರಸಿ ದೋತಿ ಪಂಚೆಯುಟ್ಟು ಜಬರ್ದಸ್ತ್ ಆಗಿ ಕಾಣುತ್ತಿರುವ ಹುಡುಗರು ಇಂತಹ ಅಪರೂಪ ಕ್ಷಣ ಸಾವಳಗಿಯಲ್ಲಿ ಶುಕ್ರವಾರ ಕಂಡಿದೆ.

ಮುಖ್ಯ ಅಥಿತಿಯಾಗಿಯಾಗಿ ಆಗಮಿಸಿದ ಕಿತ್ತೂರರಾಣಿ ಚೆನ್ನಮ್ಮ ಪ್ರಶಸ್ತಿ ಪುರಸ್ಕೃತರಾದ ಮಂಜುಳಾ ಸಂಬಾಳಮಠ ಉಳ್ಳವರು ಶಿವಾಲಯ ಮಾಡುವರಯ್ಯಾ ಎಂದು ವಿಘ್ನನಿವಾರಕನನ್ನು ನೆನೆದು ಶಾಸ್ತ್ರೀಯ ಸಂಗೀತ, ಜಾನಪದ ಗಾಯನ ಮಾಡಿದರು. ಮಲ್ಲಯ್ಯಾ ಸಂಬಾಳಮಠ ಭಾವಗೀತೆ ಹಾಡಿದರು. ಹುನ್ನೂರ ಗ್ರಾಮದ ತಬಲಾ ಮಲ್ಲಿಕಾರ್ಜುನ ನಾವ್ಹಿ, ಬನಹಟ್ಟಿ ಗ್ರಾಮದ ಕೀ ಬೋರ್ಡ ಶ್ರೀಶೈಲ ಹಲ್ಯಾಳ, ಐಕ್ಯೂಎಸಿ ಸಂಚಾಲಕಿ ಶಶಿಕಲಾ ಸಿ, ಪೂರ್ಣಿಮಾ ಸಿ. ಮಲ್ಲಿಕಾರ್ಜುನ ಜಮಖಂಡಿ, ಸಂತೋಷ ಕೈರಾವರ, ಅನೀತಾ ಸನ್ನಕ್ಕಿ, ಸಬಿಹಾ ಮಿರ್ಜೋಣಿ, ತಬಸುಮ ವಿಜಾಪೂರ ಇನ್ನೂ ಅನೇಕ ಸಿಬ್ಬಂದಿಗಳು ಇದ್ದರು.

# ಹಿಂದಿ ವಿಭಾಗ ಸ್ನಾತಕೋತ್ತರ ಸ್ನೇಹಿತರ ಪುನರ್ಮಿಲನ ಮತ್ತು ಗುರು ವಂದನೆ

**ಬಾಗಲಕೋಟೆ :** ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ 1974-75ನೇ ಸಾಲಿನ ಎಂ.ಎ ಹಿಂದಿ ವಿಭಾಗದ ಸಹಪಾಠಿಗಳಿಗಾಗಿ "ಗುರುವಂದನಾ" ಹಾಗೂ ಸುವರ್ಣ ಮಹೋತ್ಸವ ಸಮಾವೇಶ ಹಮ್ಮಿಕೊಳ್ಳಲು ಉದ್ದೇಶಿಸಲಾಗಿದ್ದು, ಹಿಂದಿ ವಿಭಾಗದ ಪ್ರಾಧ್ಯಾಪಕರ ಸನ್ಮಾನ ಹಾಗೂ ಸಹಪಾಠಿಗಳ ಪುನರ್ಮಿಲನಕ್ಕಾಗಿ,ಕೆಲವು ಸಹಪಾಠಿಗಳ ಸಂಪರ್ಕವಿಲ್ಲದ ಕಾರಣ, ಸಂಪರ್ಕದಲ್ಲಿ ಇಲ್ಲದೇ ಇರುವವರು ಸಂಘಟಕರನ್ನು ಸಂಪರ್ಕಿಸಲು ಕೋರಲಾಗಿದೆ .ವಿವರಗಳಿಗೆ : ಪ್ರೋ. ಎ.ಎಂ. ಟೆಂಗಿನಕಾಯಿ (93437 42115) ಡಾ. ಶೈಲಜಾ ಹೀರೆಮಠ (98459 71556) ಡಾ. ಜುಬೇದಾ ಪಾಟೀಲ್ (98452 31816) ಶ್ರೀ ಜಮಾದಾರ (99455 88978) ಪ್ರೋ. ಸೀತಾರಾಮ್ ಪವಾರ (94489 81509) ಸಂಪರ್ಕಿಸಿ

# ಕೃಷಿ ವಿಜ್ಞಾನ ಕೇಂದ್ರಗಳ ಸ್ಥಾಪನೆಯ ಹುಟ್ಟುಹಬ್ಬ ಆಚರಣೆ

# 21 ವರ್ಷಗಳಿಂದ ರೈತರಿಗೆ ಸಾರ್ಥಕ ಸೇವೆ




**ವಿಜಯಪುರ :** ರೈತ ಈ ದೇಶದ ಬೆನ್ನೆಲಬು. ಆತನ ಸರ್ವತೋಮುಖ ಏಳ್ಗೆಯೇ ಕೃಷಿ ವಿಜ್ಞಾನ ಕೇಂದ್ರದ ಗುರಿಯಾಗಿದೆ ಎಂದು ಸಹ ವಿಸ್ತರಣಾ ನಿರ್ದೇಶಕ ಡಾ. ರವೀಂದ್ರ ಬೆಳ್ಳಿ ಹೇಳಿದರು.

ಸೋಮವಾರ ನಗರ ಹೊರವಲಯದ ವಿಜಯಪುರ ಕೃಷಿ ವಿಜ್ಞಾನ ಕೇಂದ್ರದಲ್ಲಿ ಕೃಷಿ ವಿಜ್ಞಾನ ಕೇಂದ್ರದ ಹುಟ್ಟುಹಬ್ಬ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ಕೃಷಿ ವಿಜ್ಞಾನ ಕೇಂದ್ರವು ಕಳೆದ 21 ವರ್ಷಗಳಿಂದ ರೈತರ ಸಾರ್ಥಕ ಸೇವೆಯಲ್ಲಿ ತೊಡಗಿಸಿಕೊಂಡಿದ್ದು, ರೈತರ ವಿವಿಧ ಸಮಸ್ಯೆಗಳಿಗೆ ಸ್ಪಂದಿಸುವ, ತಂತ್ರಜ್ಞಾನ ವರ್ಗಾವಣೆಯ ಗುರುತರ ಜವಾಬ್ದಾರಿ ಹೊಂದಿದೆ ಎಂದು ಹೇಳಿದರು.

ಜಿಲ್ಲೆಯಲ್ಲಿ ರೈತರಿಗಾಗಿ ಅನೇಕ ಕಾರ್ಯಕ್ರಮಗಳನ್ನುಆಯೋಜನೆಮಾಡುವ ಮೂಲಕ ತನ್ನದೇ ಆದ ಛಾಪು ಮೂಡಿಸಿದೆ. ಈ ಕೇಂದ್ರದಿಂದ ಹಮ್ಮಿಕೊಂಡಿರುವ ವಿವಿಧ ಕ್ಷೇತ್ರ ಪರಿಶೀಲನೆಗಳಲ್ಲಿ ಮುಖ್ಯವಾಗಿ ವಿವಿಧ ಬೆಳೆಗಳಲ್ಲಿ ಅಗಲು ಸಾಲು ಪದ್ದತಿ, ದಾಳಿಂಬೆಯಲ್ಲಿ ದುಂಡಾಣು ಅಂಗಮಾರಿ ರೋಗ ನಿರ್ವಹಣೆ, ನೂತನ ತೊಗರಿ ಹಾಗೂ ಕಡಲೆ ತಳಿಗಳ ಪರಿಚಯ, ಈರುಳ್ಳಿ ಹಿಂಗಾರು ಜೋಳ ಸರದಿ ಬೆಳೆ ಪದ್ಧತಿ, ಜೋಳ ಮೌಲ್ಯವರ್ಧನೆ, ಗೋಧಿ ಬೆಳೆ ಸಮಗ್ರ ನಿರ್ವಹಣೆ ವಿಷಯಗಳಲ್ಲಿ ರೈತರಿಗೆ ತಾಂತ್ರಿಕ ಮಾಹಿತಿ ನೀಡಿದೆ ಎಂದರು.

ಹಿರಿಯ ವಿಜ್ಞಾನಿ ಡಾ. ಎಸ್. ಎಮ್. ವಸ್ತ್ರದ ಪ್ರಾಸ್ತಾವಿಕವಾಗಿ ಮಾತನಾಡಿ, ವಿಜಯಪುರ ಕೃಷಿ ವಿಜ್ಞಾನ ಕೇಂದ್ರವು ಜ್ಞಾನ ಮತ್ತು ವಿಜ್ಞಾನದ ಸಂಪನ್ಮೂಲ ಕೇಂದ್ರವಾಗಿದ್ದು, 2004ರಲ್ಲಿ ನವದೆಹಲಿಯ ಭಾರತೀಯ ಕೃಷಿ ಸಂಶೋಧನಾ ಸಂಸ್ಥೆಯ ಅನುದಾನದಿಂದ ಸ್ಥಾಪಿಸಲ್ಪಟ್ಟಿದ್ದು, ಈ ಕೇಂದ್ರದಿಂದ ಕೃಷಿ ತಂತ್ರಜ್ಞಾನ ಮೌಲ್ಯಮಾಪನ ಹಾಗೂ ಪರಿಶೀಲನೆ, ಕೃಷಿ, ತೋಟಗಾರಿಕೆ ಬೆಳೆ ಸಮಸ್ಯೆ ವಿಶ್ಲೇಷಣೆ, ರೈತರಿಗೆ ಗುಣಮಟ್ಟದ ಪರಿಕರಗಳ ಪೂರೈಕೆ, ಗ್ರಾಮೀಣ ಯುವಕ ರೈತ, ರೈತಮಹಿಳೆ, ವಿಸ್ತರಣಾ ಕಾರ್ಯಕರ್ತರಿಗೆ ತರಬೇತಿ, ರೈತ ಮಹಿಳೆಯರ ಶ್ರಮ ಕಡಿಮೆಗೊಳಿಸುವ ತಾಂತ್ರಿಕತೆಗಳು, ಸಮಸ್ಯಾತ್ಮಕ ರೈತರ ಕ್ಷೇತ್ರಗಳಿಗೆ ಭೇಟಿ ನೀಡುವ ಮೂಲಕ ರೈತರ ಸಮಸ್ಯೆಗಳಿಗೆ ಸ್ಥಳದಲ್ಲಿಯೇ ಪರಿಹಾರ ಒದಗಿಸಲಾಗುತ್ತಿದೆ ಎಂದರು.

ಕಾರ್ಯಕ್ರಮದಲ್ಲಿ ವಿಜ್ಞಾನಿಗಳಾದ ಡಾ. ಪ್ರಸನ್ ಪಿ. ಎಮ್., ಡಾ. ವಿಜಯಲಕ್ಷ್ಮಿ ?ಮೇ ಮುಂದಿನಮನಿ, ಡಾ. ಕಿರಣ ಸಾಗರ ಡಿ.ಸಿ., ಡಾ. ಶಿವರಾಜ ಕಾಂಬಳೆ ಸೇರಿದಂತೆ ರೈತ ಬಾಂಧವರು, ಕೃಷಿ ವಿದ್ಯಾರ್ಥಿಗಳು ಭಾಗವಹಿಸಿದ್ದರು.

# ರಘುನಾಥ ಹಾಗೂ ಲಕ್ಷ್ಮಣರಿಂದ ನಾಮಪತ್ರ ಸಲ್ಲಿಕೆ



**ಧಾರವಾಡ :** ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭೆಯ 2025-2030ರ ಅಧ್ಯಕ್ಷೀಯ ಮತ್ತು ಜಿಲ್ಲಾ ಪ್ರತಿನಿಧಿ ಚುನಾವಣೆಯ ಸಂಬಂಧವಾಗಿ ರಾಜ್ಯಾಧ್ಯಕ್ಷ ಸ್ಥಾನದ ಆಕಾಂಕ್ಷಿ ಎಸ್ ರಘುನಾಥ ಮತ್ತು ಧಾರವಾಡ ಜಿಲ್ಲಾ ಪ್ರತಿನಿಧಿ ಅಭ್ಯರ್ಥಿ ಲಕ್ಷ್ಮಣ ಕುಲಕರ್ಣಿ ಅವರು ಇಂದು ಮುಂಜಾನೆ ಬೆಂಗಳೂರಿನ ಎನ್ ಆರ್ ಕಾಲೊನಿಯಲ್ಲಿರುವ ಅಖಿಲ ಕರ್ನಾಟಕ ಬ್ರಾಹ್ಮಣ ಮಹಾ ಸಭಾದ ಕಚೇರಿಯಲ್ಲಿ ನಾಮ ಪತ್ರ ಸಲ್ಲಿಸಿದರು.

ಈ ಸಂದರ್ಭದಲ್ಲಿ ವಿಪ್ರ ಮುಖಂಡರಾದ ಶ್ರೀ ದತ್ತಮೂರ್ತಿ ಕುಲಕರ್ಣಿ, ಶ್ರೀ ಸಂಜೀವ ಜೋಷಿ ಎಂಜಿನಿಯರ್ ಹಾಗೂ ಹುಬ್ಬಳ್ಳಿಯ ಆಯುರ್ವೇದ ವಿದ್ಯಾಲಯದ ಕಾರ್ಯದರ್ಶಿ, ಶ್ರೀ ಪ್ರಮೋದ ಕಾರ್ಕುನ ಮಾಧ್ಯಮ ಪ್ರಕೋಷ್ಠದ ರಾಜ್ಯ ಸದಸ್ಯರು ರಾಜ್ಯ ಬಿಜೆಪಿ ಶ್ರೀ ಸುಧೀಂದ್ರ ದೇಶಪಾಂಡೆ ಶಿಕ್ಷಣ ಪ್ರಕೋಷ್ಠದ ರಾಜ್ಯ ಸಮೀತಿ ಸದಸ್ಯರು ರಾಜ್ಯ ಬಿಜೆಪಿ, ಶ್ರೀ ಶಂಕರರಾವ್ ಮಾಮಲೆದೇಶಪಾಂಡೆ ಹುಬ್ಬಳ್ಳಿ ಆಯುರ್ವೇದ ವಿದ್ಯಾಲಯದ ಖಜಾಂಚಿಗಳು, ಶ್ರೀ ಎಸ್ ಡಿ ಕುಲಕರ್ಣಿ, ಶ್ರೀ ಕೆ ಡಿ ಕುಲಕರ್ಣಿ ಕೇಶ್ವಾಪುರ ಬ್ರಾಹ್ಮಣ ಕ್ಷೇಮಾಭಿವೃದ್ಧಿ ಸಂಘದ ಅಧ್ಯಕ್ಷರು, ಶ್ರೀ ವೆಂಕಟೇಶ ದೀವಾನಜಿ ಕೇಶ್ವಾಪುರ ಬ್ರಾಹ್ಮಣ ಕ್ಷೇಮಾಭಿವೃದ್ಧಿ ಸಂಘದ ಕಾರ್ಯದರ್ಶಿ, ಶ್ರೀ ಮಹೇಶ ಕುಲಕರ್ಣಿ, ಶ್ರೀ ಸುರೇಶ ಕುಲಕರ್ಣಿ, ಶ್ರೀ ಆನಂದ ಕುಲಕರ್ಣಿ, ಶ್ರೀ ಪ್ರಾಣೇಶ ಕುಲಕರ್ಣಿ, ಶ್ರೀ ಸತೀಶ ಹುದ್ದಾರ ವಿಶ್ವವಿಪ್ರಸೇವಾ ಟ್ರಸ್ಟ್ ಸಂಚಾಲಕರು, ಪವನ ದೇಸಾಯಿ ವಿಶ್ವ ವಿಪ್ರ ಸೇವಾ ಟ್ರಸ್ಟ್ ಕಾರ್ಯದರ್ಶಿ ,ಹರ್ಷಾ ಶಿರಗುಪ್ಪಿ, ಶ್ರೀಮತಿ ವೇದಾ ಜೋಷಿ, ಶ್ರೀಮತಿ ವಿದ್ಯಾ ಜೋಷಿ, ಶ್ರೀ ಮತಿ ಭಾಗ್ಯಶ್ರೀ ಹುದ್ದಾರ, ಶ್ರೀಮತಿ ಮಧುರಾ ಕುಲಕರ್ಣಿ, ಶ್ರೀಮತಿ ಪ್ರಣತಿ ದೇಸಾಯಿ, ಮತ್ತು ವೈಭವ ಕಟ್ಟಿ ಉಪಸ್ಥಿತರಿದ್ದರು.

# ಕಾರ್ಮಿಕ, ನೌಕರರ ಭವಿಷ್ಯ ನಿಧಿ ಹಿತಾಸಕ್ತಿ ಮುಖ್ಯ: ಸಂಘದ ಕಾರ್ಯ ಶ್ಲಾಘನೀಯ: ರೂಪೇಶ




**ಬಾಗಲಕೋಟೆ :** ಕಾರ್ಮಿಕರ ಹಾಗೂ ನೌಕರರ ಹಿತಾಶಕ್ತಿ ಮುಖ್ಯವಾಗಿದ್ದು ಈ ನಿಟ್ಟಿನಲ್ಲಿ ಬಿ.ವಿ.ವಿ. ಸಂಘದ ಕಾರ್ಯ ಶ್ಲಾಘನೀಯವಾಗಿದೆ ಎಂದು ಭವಿಷ್ಯ ನಿಧಿ ಪ್ರಾದೇಶಿಕ ಕಾರ್ಯಾಲಯದ ಜಾರಿ ನಿರ್ದೇಶನ ಅಧಿಕಾರಿ ರೂಪೇಶ ಹೇಳಿದರು.

ಅವರು ನಗರದ ಬಿ.ವಿ.ವಿ.ಸಂಘದ ವಾಣಿಜ್ಯ ಮಹಾವಿದ್ಯಾಲಯದಲ್ಲಿ ಗುರುವಾರ ಭಾರತ ಸರಕಾರದ ಭವಿಷ್ಯ ನಿಧಿ ರಾಯಚೂರ ವಿಭಾಗ, ಬಿ.ವಿ.ವಿ.ಸಂಘದ ನೌಕರರ ಕ್ಷೇಮಾಭಿವೃದ್ಧಿ ಕಾರ್ಯಾಲಯದ ಸಹಯೋಗದಲ್ಲಿ ಹಮ್ಮಿಕೊಂಡ ಭವಿಷ್ಯನಿಧಿ ಹಿತಾಸಕ್ತಿ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಆಗಮಿಸಿ ಮಾತನಾಡಿದರು.

ಜನರ ಹಾಗೂ ಕಾರ್ಮಿಕರ, ನೌಕರರ ಅಹವಾಲುಗಳನ್ನು ಮಾನವಿಯ ಅನುಕಂಪದೊಂದಿಗೆ ಸ್ಪಂದಿಸಿ ಅವರಿಗೆ ಸಹಾಯವಾಗುವ ನಿಟ್ಟಿನಲ್ಲಿ ಅವರ ಹಿತಾಸಕ್ತಿಯನ್ನು ಕಾಪಾಡಬೇಕು, ಆ ನಿಟ್ಟಿನಲ್ಲಿ ಬಿ.ವಿ.ವಿ.ಸಂಘದ ಹಾಗೂ ಸಂಘದ ನೌಕರರ ಕ್ಷೇಮಾಭಿವೃದ್ಧಿಯ ಕಾರ್ಯ ಅತ್ಯಂತ ಶ್ಲಾಘನೀಯವಾಗಿದೆ ಎಂದರು.

ಕಾರ್ಯಕ್ರಮದಲ್ಲಿ ಪ್ರಭಂಧಕರಾದ ಶ್ರೀನಿವಾಸಹಾಗೂಶಾಮರಾವಅತಿಥಿಗಳಾಗಿ ಪಾಲ್ಗೊಂಡಿದ್ದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನುವಹಿಸಿದ ಪ್ರಾಚಾರ್ಯ ಡಾ. ಜಗನ್ನಾಥ ಚವ್ಹಾಣ ಅವರು ಮಾತನಾಡಿ ಮನೆ ಬಾಗೀಲಿಗೆ ಸರಕಾರ ಎನ್ನುವಂತೆ, ಪ್ರತಿತಿಂಗಳುನಡೆಯುವಈಕಾರ್ಯಕ್ರಮದ ಸದುಪಯೋಗವನ್ನು ಜನಸಾಮನ್ಯರು ಪಡೆದುಕೊಳ್ಳಬೇಕು ಎಂದರು.

ಪ್ರಸ್ತಾವಿಕವಾಗಿ ಬಿ.ವಿ.ವಿ.ಸಂಘದ ನೌಕರರ ಕ್ಷೇಮಾಭಿವೃದ್ಧಿ ಅಧಿಕಾರಿಗಳಾದ ಎಚ್. ಎನ್.ಯಾದವಾಡ ಅವರು ಮಾತನಾಡಿ ಭವಿಷ್ಯನಿಧಿಯ ಹಿತಾಸಕ್ತಿ ಕಾರ್ಯಕ್ರಮದ ಉದ್ದೇಶ ಹಾಗೂ ಸಮಾಜಿಕ ಸುರಕ್ಷಾ ಯೋಜನೆಗಳನ್ನು ವಿವರಿಸಿದರು.

ಐಕ್ಯೂಎಸಿ ಸಂಯೋಜಕರಾದ ನಾವದಗಿ, ಡಾ.ನಂಜುಂಡಸ್ವಾಮಿ, ಜಾಜಿಮಠ,ಐಕೆ ಮಠದ ಸೇರಿದಂತೆ ಅನೇಕರು ಇದ್ದರು.

ಕಾರ್ಯಕ್ರಮದಲ್ಲಿ ಬಾಗಲಕೋಟೆ ಜಿಲ್ಲೆಯ ಶಾಲೆ ಕಾಲೇಜು,

ಕಾರ್ಖಾನೆ- ಉದ್ದಿಮೇ ಮುಂತಾದ ಘಟಕಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ನೂರಾರು ಕಾರ್ಮಿಕರು ಹಾಗೂ ನೌಕರರ ಅನೇಕ ಸಮಸ್ಯೆಗಳಿಗೆ ಪರಿಹಾರ ಸೂಚಿಸಲಾಯಿತು.

# ತಾಯಿಯಿಂದಲೇ ಮಕ್ಕಳಿಗೆ ಸಂಸ್ಕಾರ, ಸಂಸ್ಕೃತಿ: ಮಾಲಾ ತಾಂಡೂರ




**ಗುಳೇದಗುಡ್ಡ :** ರಾಜಕೀಯ, ಸಾಮಾಜಿಕ, ಶೈಕ್ಷಣಿಕ ಸೇರಿದಂತೆ ಎಲ್ಲ ಕ್ಷೇತ್ರಗಳಲ್ಲಿ ಮಹಿಳೆ ಸಾಧನೆ ಅಪಾರವಾಗಿದೆ. ಪುರುಷನಿಗೆ ಸರಿ ಸಮವಾಗಿ ಮಹಿಳೆ ಬೆಳೆದು ನಿಂತಿದ್ದು, ತಾಯಿಯಿಂದಲೇ ಮಕ್ಕಳಿಗೆ ಉತ್ತಮ ಸಂಸ್ಕಾರ, ಸಂಸ್ಕೃತಿ ಲಭಿಸುತ್ತದೆ. ಮಹಿಳೆಯರನ್ನು ಗೌರವಿಸುವ ಸಮಾಜ ಬಹಳಷ್ಟು ಎತ್ತರಕ್ಕೆ ಬೆಳೆಯುತ್ತದೆ ಎಂದು ಸಂಸ್ಕೃತ ಶಿಕ್ಷಕಿ ಮಾಲಾ ತಾಂಡೂರ ಹೇಳಿದರು.

ಅವರು ಪಟ್ಟಣದ ರಾಧಾಭಾಯಿ ಕಲ್ಯಾಣ ಮಂಟಪದಲ್ಲಿ ಆರ್ಯವೈಶ್ಯ ಸಮಾಜದ ವಾಸವಿ ಮಹಿಳಾ ಮಂಡಳಿಯಿಂದ ಹಮ್ಮಿಕೊಂಡ ಅಂತರಾಷ್ಟ್ರೀಯ ಮಹಿಳಾ ದಿನಾಚರಣೆ ಕಾರ್ಯಕ್ರಮದಲ್ಲಿ ಸನ್ಮಾನ ಸ್ವೀಕರಿಸಿ ಮಾತನಾಡಿ, ಶಕ್ತಿ ದೇವತೆಯ ರೂಪದಲ್ಲಿ ಇರುವ ಮಹಿಳೆಯನ್ನು ನಾವೆಲ್ಲ ಗೌರವದಿಂದ ಕಾಣಬೇಕು. ಮಹಿಳೆ ಅಬಲೆ ಅಲ್ಲ ಎನ್ನುವುದನ್ನು ತೋರಿಸಿಕೊಟ್ಟಿದ್ದಾಳೆ. ಪುರುಷ ಪ್ರಧಾನ ಸಮಾಜದಲ್ಲಿ ಸ್ತ್ರೀ ಸಾಧನೆ ಅಪಾರವಾಗಿದೆ ಎಂದರು.

ತಹಶೀಲ್ದಾರ ಮಂಗಳಾ ಎಂ. ಅತಿಥಿಗಳಾಗಿ ಮಾತನಾಡಿ,ಗಂಡು ಮಕ್ಕಳಿಗೆ ನೀಡುವ ಆದ್ಯತೆಯನ್ನು ಪ್ರತಿಯೊಬ್ಬರೂ ಮಹಿಳೆಗೂ ನೀಡಬೇಕು. ಮಹಿಳೆ, ಪುರುಷರಲ್ಲಿ ಸಮಾನ ಹಕ್ಕು ಇದೆ. ಇದರಲ್ಲಿ ತಾರತಮ್ಯ ಬೇಡ. ಹೆಣ್ಣು ಮಕ್ಕಳು ಶಿಕ್ಷಣದಿಂದ ವಂಚಿತರಾಗಬಾರದು ಎಂದರು.

ವಾಸವಿ ಮಹಿಳಾ ಮಂಡಳ ಅಧ್ಯಕ್ಷೆ ಅನುಪಮಾ ಧಾರವಾಡ ಅಧ್ಯಕ್ಷತೆ ವಹಿಸಿದ್ದರು. ಇದೇ ಸಂದರ್ಭದಲ್ಲಿ ಶರಣಬಸವಶ್ರೀ ಪ್ರಶಸ್ತಿ ಪುರಸ್ಕೃತೆ ಮಾಲಾ ತಾಂಡೂರ, ಮಂಗಳಾ ಎಂ. ಅವರನ್ನು ಸನ್ಮಾನಿಸಲಾಯಿತು.

ಕಾರ್ಯಕ್ರಮದಲ್ಲಿ ಈಶ್ವರೀಯ ವಿಶ್ವವಿದ್ಯಾಲಯದ ಶಾಂತಾ ಅಕ್ಕ, ಸಂಸ್ಥೆ ಉಪಾಧ್ಯಕ್ಷೆ ಅನಿತಾ ಬಿಜಾಪೂರ, ಶ್ವೇತಾ ನಾರಾಯಣಕೇರಿ, ಶಕುಂತಲಾ ಅಗಡಿ, ಸುಜಾತಾ ಬೋನಗೇರಿ, ಮಾಜಿ ಅಧ್ಯಕ್ಷೆ ಗೀತಾ ಧಾರವಾಡ ಇತರರು ಇದ್ದರು.

# ತಂಬಾಕು ನಿಯಂತ್ರಣಕ್ಕೆ ಹೆಚ್ಚು ಜಾಗೃತಿ ಮೂಡಿಸಿ: ಜಿಲ್ಲಾಧಿಕಾರಿ ನಲಿನ್ ಅತುಲ್

**ಕೊಪ್ಪಳ :** ಆರೋಗ್ಯಕ್ಕೆ ಹಾನಿಕರವಾಗಿರುವ ತಂಬಾಕು ಸೇವನೆಯಿಂದಾಗುವ ದುಷ್ಪರಿಣಾಮಗಳ ಬಗ್ಗೆ ಸಾರ್ವಜನಿಕರಿಗೆ ಹೆಚ್ಚು ಜಾಗೃತಿ ಮೂಡಿಸುವುದರ ಮೂಲಕ ತಂಬಾಕು ನಿಯಂತ್ರಣಕ್ಕೆ ಕ್ರಮ ವಹಿಸಬೇಕು ಎಂದು ಜಿಲ್ಲಾಧಿಕಾರಿ ನಲಿನ್ ಅತುಲ್ ಹೇಳಿದರು.

ಅವರು ಮಂಗಳವಾರ ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ರಾಷ್ಟ್ರೀಯ ತಂಬಾಕು ನಿಯಂತ್ರಣ ಕಾರ್ಯಕ್ರಮ ಅಂಗವಾಗಿ ಕೊಪ್ಪಳ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಹಾಗೂ ಜಿಲ್ಲಾ ತಂಬಾಕು ನಿಯಂತ್ರಣ ಕೋಶದ ಸಹಯೋಗದಲ್ಲಿ ಹಮ್ಮಿಕೊಂಡಿದ್ದ ಜಿಲ್ಲಾ ಮಟ್ಟದ ಪ್ರಗತಿ ಪರಿಶೀಲನಾ ಸಭೆಯ ಅಧ್ಯಕ್ಷತೆವಹಿಸಿ ಮಾತನಾಡಿದರು.

ವಿಶ್ವದಾದ್ಯಂತ ಕ್ಯಾನ್ಸರ್, ಹೃದಯ ಸಂಬಂಧಿ ಖಾಯಿಲೆಗಳು, ಶ್ವಾಸಕೋಶದ ಖಾಯಿಲೆಗಳಿಗೆ ತಂಬಾಕು ಸೇವನೆಯೇ ಮುಖ್ಯ ಕಾರಣವಾಗಿದೆ. ತಂಬಾಕು ಸೇವನೆಯಿಂದಾಗುವ ಶ್ವಾಸಕೋಶದ ಕ್ಯಾನ್ಸರ್, ಬಾಯಿ ಕ್ಯಾನ್ಸರ್, ಹೃದಯ ಸಂಬಂಧಿ ಕಾಯಿಲೆಗಳು, ಹೆಣ್ಣು ಮಕ್ಕಳಿಗೆ ಗರ್ಭಪಾತ, ಗರ್ಭಕಂಠದ ಕ್ಯಾನ್ಸರ್ ಹಾಗೂ ಇತ್ಯಾದಿ ದುಷ್ಪರಿಣಾಮಗಳ ತಿಳುವಳಿಕೆ ಮೂಡಿಸಬೇಕು. ನಗರಸಭೆ,ಪುರಸಭೆಮತ್ತುಪಟ್ಟಣಪಂಚಾಯತಿ ಅಡಿಯಲ್ಲಿಬರುವಕಿರಾಣಿಅಂಗಡಿಗಳು,ಪಾನ್ ಶಾಪ್, ಹೊಟೇಲ್‌ಗಳಿಗೆ ಟಬಾಕೋ ವೆಂಡರ್ ಲೈಸನ್ಸ್ ನೀಡುಬ ಬಗ್ಗೆ ನಿಯಮಾನುಸಾರ ಕ್ರಮ ಕೈಗೊಳ್ಳಬೇಕು. ಸಾರ್ವಜನಿಕ ಸ್ಥಳಗಳಲ್ಲಿ ಕೊಟ್ಪಾ-2003 ಕಾಯ್ದೆಯ ಸೆಕ್ಷನ್ 4ರಂತೆ ದೂಮಪಾನ ನಿಷೇಧಿತ ಪ್ರದೇಶ ಎಂಬ ನಾಮ ಫಲಕ ಹಾಕಿಕೊಳ್ಳುವಂತೆ ನೋಡಿಕೊಳ್ಳುವುದರ ಜೊತೆಗೆ ಸ್ವಚ್ಛತಾ ಸಿಬ್ಬಂದಿಗಳ ಮೂಲಕವು ಪ್ರಚಾರ ಕೈಗೊಳ್ಳಬೇಕು ಎಂದರು.



ತಾಲ್ಲೂಕ ಆರೋಗ್ಯಾಧಿಕಾರಿಗಳು ಕೊಟ್ಪಾ-2003ರ ಕಾಯ್ದೆಯಡಿಯಲ್ಲಿ ದಾಳಿ ನಡೆಸಬೇಕು. ಪೋಲಿಸ್ ಇಲಾಖೆ, ಸಾರಿಗೆ ಇಲಾಖೆ, ಪಿ.ಡಿ.ಓ.ಗಳು, ಆರ್.ಡಿ.ಪಿ.ಆರ್, ಶಿಕ್ಷಣ ಇಲಾಖೆ, ನಗರ ಸಭೆ, ಕಾರ್ಮಿಕ ಇಲಾಖೆ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಹಾಗೂ ಪ್ರವಾಸೋದ್ಯಮ ಇಲಾಖೆ, ಅಬಕಾರಿ ಇಲಾಖೆಯವರು ಕೋಟ್ಪಾ-2003ರ ಕಾಯ್ದೆಯಡಿಯಲ್ಲಿ ತಮ್ಮ ವ್ಯಾಪ್ತಿಗೆ ಒಳಪಡುವ ಪ್ರದೇಶದಲ್ಲಿ ಕಾಯ್ದೆ ಉಲ್ಲಂಘನೆಯಾದಲ್ಲಿ ಕ್ರಮ ಜರುಗಿಸಿ, ದಂಡ ವಿಧಿಸಿ ವರದಿಯನ್ನು ಕೊಪ್ಪಳ ಜಿಲ್ಲಾ ತಂಬಾಕು ನಿಯಂತ್ರಣ ಕೋಶಕ್ಕೆ ವರದಿಯನ್ನು ತಪ್ಪದೇ ನೀಡಬೇಕು. ತಹಶೀಲ್ದಾರರ ನೇತೃತ್ವದಲ್ಲಿ ತಾಲ್ಲೂಕಾ ಮಟ್ಟದ ಪ್ರಗತಿ ಪರಿಶೀಲನಾ ಸಭೆ ನಡೆಸಬೇಕು. ಸೆಕ್ಷನ್ 6(ಬಿ) ಪ್ರಕಾರ ಶಿಕ್ಷಣ ಸಂಸ್ಥೆಯ 100 ಗಜದ ಒಳಗೆ ಯಾವುದೇ ತಂಬಾಕು ಉತ್ಪನ್ನಗಳನ್ನು ಮಾರಾಟ ಮಾಡದಂತೆ ಶಿಕ್ಷಣ ಇಲಾಖೆಯು ತೀವ್ರ ನಿಗಾವಹಿಸಬೇಕು. ತಾಲೂಕ ಪಂಚಾಯತ, ಗ್ರಾಮ ಪಂಚಾಯತ ಅಡಿಯಲ್ಲಿ ಬರುವ ಕಿರಾಣಿ ಅಂಗಡಿಗಳು, ಪಾನ್‌ಶಾಪ್, ಹೊಟೇಲ್ ಮತ್ತು ಇತರ ಸಾರ್ವಜನಿಕ ಸ್ಥಳಗಳಲ್ಲಿ ಸೆಕ್ಷನ್: 6ಎ ಅಡಿಯಲ್ಲಿ ಅಪ್ರಾಪ್ತ ವಯಸ್ಕರಿಗೆ ತಂಬಾಕು ಉತ್ಪನ್ನಗಳ ಮಾರಾಟ ಮಾಡುವುದು ಹಾಗೂ ಮಾಡಿಸುವುದು ಶಿಕ್ಷಾರ್ಹ ಅಪರಾಧವಾಗಿದ್ದು, ತಂಬಾಕು ಮಾರಾಟ ಮಾಡುವ ಅಂಗಡಿ ಮಾಲೀಕರು ಆರೋಗ್ಯ ಎಚ್ಚರಿಕೆ ನಾಮ ಫಲಕವನ್ನು ಕಡ್ಡಾಯವಾಗಿ ಅಂಗಡಿ ಮುಂದೆ ಪ್ರದರ್ಶನ ಮಾಡಬೇಕು.

ಈ ಹಿನ್ನೆಲೆಯಲ್ಲಿ ಸೂಕ್ತ ಕ್ರಮ ಕೈಗೊಳ್ಳುವಂತೆ ಸಂಬಂಧಿಸಿದ ಅಧಿಕಾರಿಗಳಿಗೆ ಸೂಚನೆ ನೀಡಿದರು.

ಕೊಟ್ಪಾ-2003ರ ಕಾಯ್ದೆಯ ನಿಯಮಾವಳಿಗಳ ಪ್ರಕಾರ ಸೆಕ್ಷನ್-4, ಸೆಕ್ಷನ್-5 ಹಾಗೂ ಸೆಕ್ಷನ್-7ರ ಉಲ್ಲಂಘನೆ ಕಂಡು ಬಂದಲ್ಲಿ ಪೋಲಿಸ್ ಇಲಾಖೆಯಿಂದ ಮುಕದ್ದಮೆ ದಾಖಲಿಸಿ, ತಂಬಾಕು ನಿಯಂತ್ರಣ ಕೋಶದಿಂದ ಜಿಲ್ಲೆಯ ಎಲ್ಲಾ ತಾಲ್ಲೂಕಾಗಳಲ್ಲಿ ದಾಳಿ ಮಾಡುವ ಸಂಧರ್ಬದಲ್ಲಿ ಪೋಲಿಸ್ ಇಲಾಖೆಯಿಂದ ಖಡ್ಡಾಯವಾಗಿ ಸಹಕಾರ ನೀಡಬೇಕು. ಜಿಲ್ಲೆಯ ಎಲ್ಲಾ ಸರಕಾರಿ ಕಛೇರಿ ಸುತ್ತಮುತ್ತಲಿನ ಆವರಣದಲ್ಲಿ ತಂಬಾಕು ಮಾರಾಟ ಮಾಡದಂತೆ ನಿಗಾವಹಿಸುವುದು ಕಡ್ಡಾಯವಾಗಿದೆ ಹಾಗೂ ಧೂಮಪಾನ ಮುಕ್ತ ಕಛೇರಿಯನ್ನಾಗಿ ಮಾಡಬೇಕು. ಎಲ್ಲಾ ತಾಲೂಕಾ ಬಸ್ ನಿಲ್ದಾಣಗಳಲ್ಲಿ ತಂಬಾಕು ಮಾರಾಟ ಮತ್ತು ಧೂಮಪಾನ ಮಾಡದ ಹಾಗೆ ನಿಗಾವಹಿಸುವ ಬಗ್ಗೆ ಹಾಗೂ ಸೆಕ್ಷನ್ 4ರ ನಾಮಫಲಕವನ್ನು ಕಡ್ಡಾಯವಾಗಿ ಹಾಕಿಕೊಳ್ಳಲು ಸಾರಿಗೆ ಇಲಾಖೆ ಅಧಿಕಾರಿಗಳು ಕ್ರಮ ವಹಿಸಬೇಕು ಎಂದು ಹೇಳಿದರು.

ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ ಸದಸ್ಯ ಕಾರ್ಯದರ್ಶಿಗಳಾದ ಮಹಾಂತೇಶ ಎಸ್ ದರಗದ ಅವರು ಮಾತನಾಡಿ, ತಂಬಾಕು ಮಾರಾಟ ಮತ್ತು ಸೇವನೆ ಕುರಿತು ಇರುವ ಕಾನೂನುಗಳು, ದಂಡ ಮತ್ತು ಶಿಕ್ಷೆಗಳ ಸಂಪೂರ್ಣ ಮಾಹಿತಿಯನ್ನು ಸಾರ್ವಜನಿಕರಿಗೆ ತಿಳಿಸಿದಾಗ ಮಾತ್ರ ತಂಬಾಕು ಮಾರಾಟ ಮತ್ತು ಸೇವನೆಯ ಮೇಲೆ ಪರಿಣಾಮಕಾರಿ ಬದಲಾವಣೆ ಸಾಧ್ಯವಾಗಿದೆ. ಸಿಗರೇಟ್ ಮತ್ತು ಇತರ ತಂಬಾಕು ಉತ್ಪನ್ನಗಳ ಕಾಯ್ದೆ ಕೊಟ್ಪಾ-2003ರ ಕುರಿತು ವ್ಯಾಪಕ ಪ್ರಚಾರ ಕೈಗೊಳ್ಳಬೇಕು ಎಂದರು.

ಸಭೆಯಲ್ಲಿ ಸಾರ್ವತ್ರಿಕ ಲಸಿಕಾ ಕಾರ್ಯಕ್ರಮ, ಶಿಶು ಮತ್ತು ತಾಯಿ ಮರಣ ಪ್ರಮಾಣ ತಡೆ, ರಾಷ್ಟ್ರೀಯ ಆರೋಗ್ಯ ಕಾರ್ಯಕ್ರಮಗಳು ಸೇರಿದಂತೆ ವಿವಿಧ ವಿಷಯಗಳ ಕುರಿತು ಚರ್ಚೆ ನಡೆಯಿತು.

ಈ ಸಂದರ್ಭದಲ್ಲಿ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ರಾಹುಲ್ ರತ್ನಂ ಪಾಂಡೇಯ, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿ ಡಾ ಟಿ.ಲಿಂಗರಾಜು, ಜಿಲ್ಲಾ ಕುಟುಂಬ ಕಲ್ಯಾಣ ಅಧಿಕಾರಿ ಡಾ.ರವಿಂದ್ರ, ಜಿಲ್ಲಾ ಆರ್.ಸಿ.ಹೆಚ್ ಅಧಿಕಾರಿ ಡಾ.ಪ್ರಾಕಾಶ, ಜಿಲ್ಲಾ ಸರ್ವೇಕ್ಷಣಾಧಿಕಾರಿ ಡಾ.ನಂದಕುಮಾರ್, ಜಿಲ್ಲಾ ಕ್ಷಯ ರೋಗ ನಿರ್ಮೂಲನಾಧಿಕಾರಿ ಡಾ.ಶಶಿಧರ, ಜಿಲ್ಲಾ ರೋಗವಾಹಕ ಆಶ್ರಿತ ರೋಗಗಳ ನಿಯಂತ್ರಣಾಧಿಕಾರಿ ಡಾ.ವೆಂಕಟೇಶ, ಗಂಗಾವತಿ ಆಸ್ಪತ್ರೆಯ ಮುಖ್ಯ ವೈದ್ಯಾಧಿಕಾರಿ ಡಾ. ಈಶ್ವರ ಸವಡಿ, ತಾಲೂಕ ಆರೋಗ್ಯಾಧಿಕಾರಿಗಳಾದ ಕೊಪ್ಪಳದ ಡಾ. ರಾಮಾಂಜಿನೇಯ, ಕುಷ್ಟಗಿಯ ಡಾ.ಆನಂದ, ಗಂಗಾವತಿಯ ಡಾ. ಗೌರಿಶಂಕರ, ಯಲಬುರ್ಗಾದ ಡಾ.ಅಂಬರೀಶ್, ಕೊಪ್ಪಳ ಕಿಮ್ಸ್ ತಜ್ಞವೈದ್ಯರಾದ ಡಾ.ನಾರಾಯಣ, ಜಿಲ್ಲಾ ಆರೋಗ್ಯ ಶಿಕ್ಷಣಾಧಿಕಾರಿ ಶಿವಾನಂದ ಪೂಜಾರ ಹಾಗೂ ಪೊಲೀಸ್ ಇಲಾಖೆ ಅಧಿಕಾರಿಗಳು ಸೇರಿದಂತೆ ವಿವಿಧ ಇಲಾಖೆಗಳ ಅಧಿಕಾರಿಗಳು ಉಪಸ್ಥಿತರಿದ್ದರು.

# 30 ದಿನಗಳ ಬ್ಯೂಟಿಪಾರ್ಲರ್ ನಿರ್ವಹಣೆ ತರಬೇತಿಗೆ ಅರ್ಜಿ ಆಹ್ವಾನ

**ಕೊಪ್ಪಳ :** ಉತ್ತರ ಕನ್ನಡ ಜಿಲ್ಲೆಯ ಹಳಿಯಾಳದ ಕೆನರಾ ಬ್ಯಾಂಕ್ ದೇಶಪಾಂಡೆ ಆರ್‌ಸೆಟಿ ಸಂಸ್ಥೆಯಿಂದ ನಿರುದ್ಯೋಗಿ ಯುವತಿಯರಿಗಾಗಿ 30 ದಿನಗಳ ಬ್ಯೂಟಿಪಾರ್ಲರ್ ನಿರ್ವಹಣಾ ತರಬೇತಿಗಳನ್ನ ಉಚಿತವಾಗಿ ನೀಡಲಾಗುತ್ತಿದ್ದು, ಆಸಕ್ತ ಗ್ರಾಮೀಣ ಭಾಗದ ನಿರುದ್ಯೋಗಿ ಯುವತಿಯರಿಗಾಗಿ ಅರ್ಜಿ ಆಹ್ವಾನಿಸಲಾಗಿದೆ. 18 ರಿಂದ 45 ವಯೋಮಾನದ ನಿರುದ್ಯೋಗಿ ಯುವತಿಯರಿಗಾಗಿ ಮೇ 15 ರಿಂದ 30 ದಿನಗಳಕಾಲಉಚಿತತರಬೇತಿಗಳನ್ನುನೀಡಲಾಗುತ್ತದೆ. ಈ ತರಬೇತಿಗಳು ಸ್ವ-ಉದ್ಯೋಗ ಪ್ರಾರಂಭಿಸಿ, ಸ್ವಾವಲಂಬಿ ಜೀವನ ನಡೆಸಲು ಅನುಕೂಲವಾಗಲಿವೆ. ತರಬೇತಿಯು ಊಟ ಹಾಗೂ ವಸತಿಯೊಂದಿಗೆ ಸಂಪೂರ್ಣ ಉಚಿತವಾಗಿದ್ದು, ಮೊದಲು ಬಂದವರಿಗೆ ಹಾಗೂ ಗ್ರಾಮೀಣ ಭಾಗದವರಿಗೆ ಮೊದಲ ಆದ್ಯತೆ ನೀಡಲಾಗುತ್ತದೆ.

ತರಬೇತಿಯಲ್ಲಿ ಐಬ್ರೂ ಥ್ರೆಂಡಿಂಗ್, ಫೇಶಿಯಲ್, ವ್ಯಾಕ್ಸಿಂಗ್, ಪೆಡಿಕ್ಯೂರ್, ಮೆಹಂದಿ, ಸ್ಯಾರಿಡ್ರೆಪಿಂಗ್, ಕೇಶವಿನ್ಯಾಸ, ಕೇಶವಿನ್ಯಾಸ, ಹೆಚ್‌ಡಿ ಮೇಕಪ್ ಕೌಶಲ್ಯ, ಸಾಧನಾ ಪ್ರೇರಣಾ ತರಬೇತಿ, ಉದ್ಯಮಶಿಲತೇಯ ದಕ್ಷ ಗುಣಗಳು, ಹೊಸ ಉದ್ಯಮದ ಸ್ಥಾಪನೆ ಬಗ್ಗೆ ಮಾಹಿತಿ, ಮಾರುಕಟ್ಟೆ ಸಮೀಕ್ಷೆ, ಮಾರಾಟದ ತಂತ್ರಗಳು, ಯಶಸ್ವಿ ಉದ್ಯಮಗಳಿಂದ ಅನುಭವ ಹಂಚಿಕೆ, ಸಾಫ್ಟ್ ಸ್ಕಿಲ್ಸ್, ಯೋಗ ತರಬೇತಿ ಹಾಗೂ ಬ್ಯಾಂಕಿನಿಂದ ಸಾಲ ಪಡೆದು ಸ್ವ-ಉದ್ಯೋಗ ಪ್ರಾರಂಭಿಸಲು ಬೇಕಾಗುವ ಜ್ಞಾನ, ಸರಕಾರಿ ಯೋಜನೆಗಳು ಮತ್ತು ಯೋಜನಾ ವರದಿ ತಯಾರಿಕೆ ಇನ್ನಿತರ ಮಾಹಿತಿಗಳನ್ನು ಉಚಿತವಾಗಿ ನೀಡಲಾಗುವುದು. ಅಭ್ಯರ್ಥಿಗಳು ತಮ್ಮ ಹೆಸರು, ವಿಳಾಸಗಳನ್ನು ನೊಂದಾಯಿಸಲು ತಿಳಿಸಲಾಗಿದೆ. ಅಸಕ್ತರು ನಮ್ಮ ಸಂಸ್ಥೆಯ ಈ ಕೆಳಗಿನ ದೂರವಾಣಿ ಸಂಖ್ಯೆಗಳನ್ನು ಸಂಪರ್ಕಿಸಬಹುದು ಅಥವಾ ಆನ್‌ಲೈನ ಮೂಲಕ (ವೆಬ್‌ಸೈಟ್: www.rsetihaliyal.org) ಅರ್ಜಿ ಸಲ್ಲಿಸಬಹುದು. https://forms.gle/35fM7G9agaWV6XLC6 ಲಿಂಕ ಬಳಸಿ ಅರ್ಜಿ ಸಲ್ಲಿಸಬಹುದು. ತರಬೇತಿಯಲ್ಲಿ ಭಾಗವಹಿಸಲು ಆಸಕ್ತರು ನಿರ್ದೇಶಕರು, ಕೆನರಾ ಬ್ಯಾಂಕ್ ದೇಶಪಾಂಡೆ ಆರ್‌ಸೆಟ್ ಸಂಸ್ಥೆ, ಹಳಿಯಾಳ, ಉತ್ತರ ಕನ್ನಡ ಜಿಲ್ಲೆ ಈ ವಿಳಾಸಕ್ಕೆ ಅಥವಾ ದೂರವಾಣಿ ಸಂಖ್ಯೆ: 8970145354, 9483485489, 9482188780 ಮೂಲಕ ಸಂಪರ್ಕಿಸಲು ಸಂಸ್ಥೆಯ ಪ್ರಕಟಣೆಯಲ್ಲಿ ತಿಳಿಸಿದೆ.

# ಯುವನಿಧಿ ಮೂಲಕ ಪದವೀಧರ ವಿದ್ಯಾರ್ಥಿಗಳ ಭವಿಷ್ಯಕ್ಕೆ ನವಚೈತನ್ಯ: ಗೊಂಡಬಾಳ

**ಕೊಪ್ಪಳ:** ರಾಜ್ಯ ಸರಕಾರ ಐದು ಗ್ಯಾರಂಟಿಗಳ ಮೂಲಕ ಬಡ ಮತ್ತು ಮಧ್ಯಮ ವರ್ಗದ ಜನರ ಅಸಹಾಯಕ ಬದುಕಿಗೆ ಆಸರೆ ನೀಡಿದ್ದಾರೆ, ಅದನ್ನು ಕೆಲವರು ಬಿಟ್ಟಿ ಎಂದು ಅಪಭ್ರಂಶಗೊಳಿಸುತ್ತಿರುವದು ನೋವಿನ ಸಂಗತಿ ಎಂದು ಜಿಲ್ಲಾ ಗ್ಯಾರಂಟಿ ಅನುಷ್ಠಾನ ಪ್ರಾಧಿಕಾರದ ಜಿಲ್ಲಾ ಉಪಾಧ್ಯಕ್ಷ ಮಂಜುನಾಥ ಜಿ. ಗೊಂಡಬಾಳ ಅಭಿಪ್ರಾಯಪಟ್ಟರು.



ಅವರು ನಗರದ ಸರಕಾರಿ ಬಾಲಿಕೆಯರ ಪ್ರಥಮದರ್ಜೆ ಕಾಲೇಜಿನಲ್ಲಿ ಕೌಶಲ್ಯಾಭಿವೃದ್ಧಿ ಮತ್ತು ಜೀವನೋಪಾಯ ಇಲಾಖೆ ಹಾಗೂ ಜಿಲ್ಲಾ ಉದ್ಯೋಗ ವಿನಿಮಯ ಕೇಂದ್ರದಿಂದ ಹಮ್ಮಿಕೊಳ್ಳಲಾಗಿದ್ದ ಯುವನಿಧಿ ಯೋಜನೆಯ ಮಾಹಿತಿ ಮತ್ತು ಜಾಗೃತಿ ಕಾರ್ಯಕ್ರಮದಲ್ಲಿ ಮಾತನಾಡಿದರು.

ಯುವನಿಧಿ ಮೂಲಕ ಡಿಪ್ಲಮೋ ಪದವೀಧರರಿಗೆ 1500 ಮತ್ತು ಪದವೀಧರರಿಗೆ 3000 ರೂಪಾಯಿ ನಿರುದ್ಯೋಗ ಭತ್ಯೆಯನ್ನು ಸುಮಾರು 18 ತಿಂಗಳು ನೀಡುವ ಯೋಜನೆಯಾಗಿದ್ದು, ಅದರ ಮೂಲಕ ಪದವಿ ಮುಗಿಸಿದ ನಿರುದ್ಯೋಗಿಗಳಿಗೆ ಮುಂದಿನ ಹಂತದಲ್ಲಿ ಆಗುವ ತೊಂದರೆ ನಿವಾರಿಸುವ ಯೋಜನೆ ಆಗಿದೆ, ಇದರ ಅನುಕೂಲ ಪಡೆದು ಬದುಕು ಕಟ್ಟಿಕೊಳ್ಳಬಹುದು. ಒಬ್ಬ ಅದವೀಧರ 54 ಸಾವಿರ ರೂಪಾಯಿ ಮತ್ತು ಒಬ್ಬ ಡಿಪ್ಲಮೋ ಪದವಿ ಪಡೆದವರು 27 ಸಾವಿರ ಭತ್ಯೆಯನ್ನು ಪಡೆಯಲು ಅರ್ಹರಾಗಿದ್ದು ಇದೊಂದು ಮಹತ್ವದ ಯೋಜನೆಯಾಗಿದೆ. ಬಿಟ್ಟಿ ಭಗ್ಯ ಎಂದವರೇ ಬೇರೆ ರಾಜ್ಯಗಳಲ್ಲಿ ಇವುಗಳನ್ನು ನಕಲು ಮಾಡಿ ಕೊಡುತ್ತಿದ್ದಾರೆ.

ಬಡವರಿಗೆ,ಆರ್ಥಿಕವಾಗಿಸಬಲರಲ್ಲದವರಿಗೆ ಕೊಡುವ ಸರಕಾರದ ಸಹಾಯ ಧನವನ್ನು ಹಂಗಿಸುವದು ಭಾರತೀಯ ಮೂಳಭೂತ ಹಕ್ಕುಗಳಿಗೆ ತೊಂದರೆಕೊಟ್ಟಂತಾಗುತ್ತದೆ, ಇದು ಸಹ ಕಾನೂನು ಮತ್ತು ಸಂವಿಧಾನದ ಉಲ್ಲಂಘನೆ ಎಂದರು. ಪ್ರತಿಯೊಬ್ಬರಿಗೂ ಜೀವಿಸುವ, ಉತ್ತಮವಾಗಿ ಬದುಕುವ ಹಕ್ಕನ್ನು ಬಾಬಾ ಸಾಹೇಬರು ಕೊಟ್ಟಿದ್ದು ಅದನ್ನು ಪ್ರಾಮಾಣಿಕವಾಗಿ ನಿಭಾಯಿಸುವ ಕಾರ್ಯವನ್ನು ರಾಜ್ಯ ಸರಕಾರ ಮಾಡುತ್ತಿದೆ ಎಂದರು.

ಉದ್ಯೋಗ ವಿನಿಮಯ ಕೇಂದ್ರದ ಜೆಬಿಟಿ ಹನುಮೇಶ ಮಾತನಾಡಿ, ಪ್ರತಿ ಗ್ರಾಮದ ಅಥವಾ ನಗರದ ಗ್ರಾಮ್ ಒನ್ ಕೇಂದ್ರ, ಕರ್ನಾಟಕ ಒನ್ ಕೇಂದ್ರ ಅಥವಾ ಸರಕಾರದ ಅನುಮತಿ ಪಡೆದ ಆನ್ ಲೈನ್ ಸೆಂಟರ್ ಮೂಲಕ ಅರ್ಜಿ ಸಲ್ಲಿಸಬಹುದು ಅಥವಾ ಇದಕ್ಕೆ ಅರ್ಹರಾದವರು ನೇರವಾಗಿ ಉದ್ಯೋಗ ವಿನಿಮಯ ಕೇಂದ್ರಕ್ಕೆ ಬಂದರೂ ಸಹ ಉಚಿತವಾಗಿ ಅರ್ಜಿ ಹಾಕಿಕೊಡಲಾಗುವದು ಎಂದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ಸರ್ಕಾರಿ ಪ್ರಥಮ ದರ್ಜೆ ಮಹಿಳಾ ಕಾಲೇಜಿನ ಪ್ರಾಂಶುಪಾಲರಾದ ಡಾ. ಗಣಪತಿ ಕೆ. ಲಮಾಣಿ ವಹಸಿದ್ದರು. ಗ್ಯಾರಂಟಿ ಯೋಜನೆ ಪ್ರಾಧಿಕಾರ ತಾಲೂಕ ಸದಸ್ಯ ಮಾನ್ವಿ ಪಾಶಾ, ದೈಹಿಕ ಶಿಕ್ಷಣ ನಿರ್ದೇಶಕ ಡಾ. ಪ್ರದೀಪ್ ಕುಮಾರ ಯು., ಕಾಲೇಜಿನ ಐ ಕ್ಯೂ ಏ ಸಿ ಸಂಯೋಜಕ ಡಾ. ಅಶೋಕ್ ಕುಮಾರ, ಗ್ರಂಥಪಾಲಕ ಡಾ. ಮಲ್ಲಿಕಾರ್ಜುನ ಬಿ., ಉದ್ಯೋಗ ವಿನಿಮಯ ಕೇಂದ್ರದ ಆಪ್ತ ಸಮಾಲೋಚಕಿ ದುರ್ಗಾ ಶ್ಯಾನಬೋಗರ, ನೂರಾರು ವಿದ್ಯಾರ್ಥಿಗಳು ಇದ್ದರು.

# ಶ್ರೀಶೈಲ ಜಗದ್ಗುರುಗಳಿಗೆ ಗೌರವಾರ್ಪಣೆ



**ಮಹಾಲಿಂಗಪುರ :** ಪಟ್ಟಣದ ಶ್ರೀಶೈಲ ಪಾದಯಾತ್ರಾ ಅನ್ನದಾಸೋಹ ಸಮಿತಿಯಿಂದ ಇಪ್ಪತ್ತನೇ ವರ್ಷದ ಅನ್ನ ದಾಸೋಹವು

ಮಾರ್ಚ 25 ರಿಂದ 30 ರವರೆಗೆ ಸುಕ್ಷೇತ್ರ ಶ್ರೀಶೈಲಂನಲ್ಲಿ ನಿತ್ಯ ನಡೆಯುತ್ತಿದೆ.

ಗುರುವಾರ ರಾತ್ರಿ ನಡೆದ ಧರ್ಮ ಸಭೆಯಲ್ಲಿ ಮಹಾಲಿಂಗಪುರದ ಶ್ರೀಶೈಲ ಪಾದಯಾತ್ರಾ ಅನ್ನದಾಸೋಹ ಸಮಿತಿಯಿಂದ ಶ್ರೀಶೈಲಂ ಸೂರ್ಯ ಸಿಂಹಾಸನ ಪೀಠದ ಜಗದ್ಗುರುಗಳಾದ ಡಾ. ಚನ್ನಸಿದ್ಧರಾಮ ಪಂಡಿತಾರಾಧ್ಯ ಭಗವತ್ಪಾದರಿಗೆ ಗೌರವಾರ್ಪಣೆ ಸಲ್ಲಿಸಲಾಯಿತು.

ಅನ್ನ ದಾಸೋಹ ಸಮಿತಿಯ ಅಧ್ಯಕ್ಷ ವಿಜುಗೌಡ ಪಾಟೀಲ, ಉಪಾಧ್ಯಕ್ಷ ವಿಷ್ಣುಗೌಡ ಪಾಟೀಲ, ಸದ್ಭಕ್ತರಾದ ಮಹಾಂತೇಶ ಚಿಂಚಲಿ, ವಿರುಪಾಕ್ಷ ಉಳ್ಳಾಗಡ್ಡಿ, ವಿಜಯ ಕಂಬಾರ, ಮಹಾಲಿಂಗ ಗುರವ ಸೇರಿದಂತೆ ಹಲವರು ಉಪಸ್ಥಿತರಿದ್ದರು.

# ಎಪಿಎಂಸಿ ಚಿಕ್ಕ ಮಳಿಗೆಗಳ ನಿರ್ಮಾಣಕ್ಕೆ ಚಾಲನೆ



**ಮಹಾಲಿಂಗಪುರ :** ಕೃಷಿ ಮಾರುಕಟ್ಟೆ ಸಮಿತಿಗೆ ಹೆಚ್ಚಿನ ಆದಾಯ, ಸಣ್ಣಪುಟ್ಟ ವ್ಯಾಪಾರಸ್ಥರ ಅನುಕೂಲಕ್ಕಾಗಿ ಜತ್ತ-ಜಾಂಬೋಟಿ ರಾಜ್ಯ ಹೆದ್ದಾರಿ ಪಕ್ಕದ ಎಪಿಎಂಸಿ ಜಾಗೆಯಲ್ಲಿ ಚಿಕ್ಕ ಮಳಿಗೆಗಳನ್ನು ನಿರ್ಮಾಣ ಮಾಡಲಾಗುತ್ತಿದೆ ಎಂದು ತೇರದಾಳ ಶಾಸಕ ಸಿದ್ದು ಸವದಿ ಹೇಳಿದರು.

ಪಟ್ಟಣದ ಎಪಿಎಂಸಿ ಜಾಗೆಯಲ್ಲಿ ಸನ್ 2023-24 ನೇ ಸಾಲಿನ ವಾರ್ಷಿಕ ಕ್ರಿಯಾ ಯೋಜನೆಯಲ್ಲಿ ಮಂಜೂರಿಯಾದ ಸುಮಾರು 79 ಲಕ್ಷಗಳ ರೂ. ಗಳ ಮೊತ್ತದ 11 ಚಿಕ್ಕ ಮಳಿಗೆಗಳ ನಿರ್ಮಾಣ ಕಾಮಗಾರಿಗೆ ಭೂಮಿ ಪೂಜೆ ನೆರವೇರಿಸಿ ಮಾತನಾಡಿದ ಅವರು ಐದೂವರೆ ತಿಂಗಳಲ್ಲಿ ಉತ್ತಮ ಗುಣಮಟ್ಟದ ಮಳಿಗೆಗಳನ್ನು ನಿರ್ಮಿಸಬೇಕೆಂದು ಗುತ್ತಿಗೆದಾರರಿಗೆ ಎಚ್ಚರಿಕೆ ನೀಡಿದರು.

ಬಿಜೆಪಿ ಮುಖಂಡ ಮಹಾಂತೇಶ ಹಿಟ್ಟಿನಮಠ, ಮಹಾಲಿಂಗಪ್ಪ ಕುಳ್ಳೋಳ್ಳಿ, ಸುರೇಶ್ ಅಕ್ಕಿವಾಟ, ಈರಪ್ಪ ದಿನ್ನಿಮನಿ, ಮನೋಹರ ಶಿರೋಳ, ಜಿ. ಎಸ್. ಗೊಂಬಿ, ಬಸವರಾಜ ಯರಗಟ್ಟಿ, ಶಿವಾನಂದ ಅಂಗಡಿ, ಶಂಕರಗೌಡ ಪಾಟೀಲ, ಚೆನ್ನಪ್ಪ ಪಟ್ಟಣಶೆಟ್ಟಿ, ವೀರೇಶ ಮುಂಡಗನೂರ, ಶ್ರೀಶೈಲ ನುಚ್ಚಿ, ಬಾಳು ಮಾಳವದೆ, ಮಹಾಲಿಂಗಪ್ಪ ಕಂಠಿ, ಚಂದ್ರಶೇಖರ ಗೊಂದಿ, ವೀರಭದ್ರ ಮುಗಳ್ಯಾಳ, ಮಹೇಶ ಜಿಡ್ಡಿಮನಿ, ಬಸು ಹುಕ್ಕೇರಿ, ಮಹೇಶ ಮುಕುಂದ, ಎ.ಪಿ.ಎಂ.ಸಿ. ಕಾರ್ಯದರ್ಶಿ ಎಲ್. ಎಂ.ಉದ್ದಪ್ಪನ್ನವರ, ಸಹ ಕಾರ್ಯದರ್ಶಿಗಳಾದ ಬಿ. ಪಿ. ಬಾಡಗಿ, ಡಿ. ಬಿ. ಬಸಗೌಡರ, ಸಿಬ್ಬಂದಿ ಆರ್. ಎಚ್. ರಾಠೋಡ್, ಎ. ಎಲ್. ಕಾಂಬಳೆ, ಮಾರುಕಟ್ಟೆ ಮೇಲ್ವಿಚಾರಕ ಬಿ. ಎನ್. ಕುಂಬಾರ, ಕುಡಚಿ ಕೃಷಿ ಮಾರುಕಟ್ಟೆ ಕಾರ್ಯದರ್ಶಿ ಆರ್. ಎಚ್.ಭೋಜನ್ನವರ ಸೇರಿದಂತೆ ಹಲವರು ಉಪಸ್ಥಿತರಿದ್ದರು.

# ಜವಾಹರ ನವೋದಯ ವಿದ್ಯಾಲಯಕ್ಕೆ ಆಯ್ಕೆ



**ಲೋಕಾಪುರ:** ಸಮೀಪದ ಜಾಡರ ಅರಳೀಕಟ್ಟಿ ಗ್ರಾಮದ ವಿದ್ಯಾಚೇತನ ಹಿರಿಯ ಪ್ರಾಥಮಿಕ ಶಾಲೆಯ ಮೂವರು ವಿದ್ಯಾರ್ಥಿಗಳು 2025-26 ನೇ ಸಾಲಿನ ಜವಾಹರ ನವೋದಯ ವಿದ್ಯಾಲಯಕ್ಕೆ ಆಯ್ಕೆಯಾಗಿದ್ದಾರೆ.

ಶ್ರಾವ್ಯಾ ಅರೇನಾಡ, ಶ್ರೀನಿಧಿ ಪಾಟೀಲ, ತನುಜ ಯರಝರ್ವಿ ಈ 3 ವಿದ್ಯಾರ್ಥಿಗಳು ಆಯ್ಕೆ ಯಾಗಿದ್ದಾರೆ ಎಂದು ಮುಖ್ಯ ಶಿಕ್ಷಕ ವಿವೇಕ ಮರಾಠಿ ತಿಳಿಸಿದ್ದಾರೆ,

ಆಯ್ಕೆಯಾದ ವಿದ್ಯಾರ್ಥಿಗಳಿಗೆ ಸಂಸ್ಥೆ ಸಂಸ್ಥಾಪಕ ಎಸ್.ಎಮ್. ರಾಮದುರ್ಗ, ಶಿಕ್ಷಕರಾದ ಗಂಗಾ ಸಕ್ರಿ, ಚಿದಾನಂದ ಮುಂಡಾಸದ, ಎಮ್.ಬಿ. ಮುಜಾವರ, ಶಶಿಕಲಾ ಪಾಟೀಲ, ಸರಸ್ವತಿ ಮಾದರ, ಯಶೋಧಾ ಮರಾಠಿ, ಗೀತಾ ನಾಯಕ, ಭೀಮಪ್ಪಾ ಹಾದಿಮನಿ, ಶಿಲ್ಪಾ ಗೌಡ, ಸರಸ್ವತಿ ದೇಸಾಯಿ, ರಾಜೇಶ್ವರಿ ಗಂಗಣ್ಣವರ, ಗಂಗಾ ಸಗರಿ, ಪಲ್ಲವಿ ಗೌಡ, ಅಕ್ಷತಾ ಕಂಬಾರ, ಮಂಜುಳಾ ಪಾಟೀಲ, ಮಧು ತೆಗ್ಗಿ, ಸುರೇಶ ಮರಾಠಿ, ವೆಂಕಟ್ರಮಣ ಗೌಡ, ಉಮಾ ದೊಡ್ಡಣ್ಣವರ, ಮಂಜುಳಾ ಕಾಜಗಾರ, ಸುಮಯ್ಯಾಬೇಗಂ ನದಾಫ, ಸಂಗೀತಾ ತಳವಾರ, ಸವಿತಾ ಹೊಸಮನಿ, ಬಸವರಾಜ ಕೆ, ಅಭಿನಂದಿಸಿದ್ದಾರೆ.

# ಬಸನಗೌಡ ಪಾಟೀಲ ಯತ್ನಾಳರನ್ನು ಉಚ್ಚಾಟನೆ ಮಾಡಿದ ಬಿ ಎಸ್ ಯಡಿಯೂರಪ್ಪ, ಪುತ್ರ ವಿಜಯೇಂದ್ರ ವಿರುದ್ದ ಪ್ರತಿಭಟನೆ



**ಹಳ್ಳೂರ :** ವಿಜಯಪೂರ ನಗರ ಕ್ಷೇತ್ರದ ಶಾಸಕ ಬಸನಗೌಡ ಪಾಟೀಲ ಯತ್ನಾಳ ಅವರನ್ನು ಬಿಜೆಪಿ ಪಕ್ಷದ ಪ್ರಾಥಮಿಕ ಸದಸ್ಯತ್ವದಿಂದ 6 ವರ್ಷ ಉಚ್ಚಾಟನೆ ಮಾಡಿದ ಕ್ರಮವನ್ನು ಖಂಡಿಸಿ ಉಚ್ಚಾಟನೆಗೆ ಕಾರಣಿಭೂತರಾದ ಮಾಜಿ ಮುಖ್ಯ ಮಂತ್ರಿ ಬಿ ಎಸ್ ಯಡಿಯೂರಪ್ಪ ಹಾಗೂ ಬಿಜೆಪಿ ರಾಜ್ಯಾದ್ಯಕ್ಷ ಬಿ ವಾಯ್ ವಿಜೇಯಂದ್ರ ಅವರ ಪ್ರತಿಕೃತಿ ದಹನ ಮಾಡಿ ಆಕ್ರೋಶ ವ್ಯಕ್ತಪಡಿಸಿ ದಿಕ್ಕಾರ ಕೂಗಿದರು.

ಹಳ್ಳೂರ ಗುಬ್ಬಿ ಬಸ್ ನಿಲ್ದಾಣ ಮುಧೋಳ ನಿಪ್ಪಾನಿ ರಾಜ್ಯ ಹೆದ್ದಾರಿಯಲ್ಲಿ ನಡೆದ ಪ್ರತಿಭಟನೆ ಸ್ಥಳಕ್ಕೆ ಆಗಮಿಸಿದ ಗ್ರಾಮ ಆಡಳಿತ ಅಧಿಕಾರಿ ಸಂಜು ಅಗ್ನೇಪ್ಪಗೋಳ ಆವರಿಗೆ ಉಚ್ಚಾಟನೆಯ ಆದೇಶ ಹಿಂಪಡಿಯಬೇಕೆಂದು ಸರಕಾರಕ್ಕೆ ಮನವಿ ಸಲ್ಲಿಸಿದರು.

ಬಸನಗೌಡ ಪಾಟೀಲ ಯತ್ನಾಳ ಅಭಿಮಾನಿ ಬಳಗ ಹಳ್ಳೂರ ನೂರಾರು ಅಭಿಮಾನಿಗಳು ಮುಧೋಳ್ ನಿಪ್ಪಾನಿ ರಾಜ್ಯ ಹೆದ್ದಾರಿಯಲ್ಲಿ ಪ್ರತಿಭಟನೆ ಮಾಡಿ ತೀವ್ರ ಆಕ್ರೋಶ ವ್ಯಕ್ತಪಡಿಸಿದರು. ಈ ಸಮಯದಲ್ಲಿ ಬಸನಗೌಡ ಪಾಟೀಲ ಯತ್ನಾಳ ಅಭಿಮಾನಿ ಬಳಗದವರಿದ್ದರು.

**ವರದಿ ಮುರಿಗೆಪ್ಪ ಮಾಲಗಾರ**

# ರಾಜ್ಯದಲ್ಲಿ ಕಾನೂನು ಸುವ್ಯವಸ್ಥೆ ಹದಗೆಟ್ಟಿದೆ

**ಮೂಡಲಗಿ :** ಕರ್ನಾಟಕದಲ್ಲಿ ಕಾನೂನು ಸುವ್ಯವಸ್ಥೆ ಹತೋಟಿಗೆ ತರುವಲ್ಲಿ ರಾಜ್ಯ ಕಾಂಗ್ರೆಸ್ ಸರ್ಕಾರ ಸಂಪೂರ್ಣ ವಿಫಲವಾಗಿದೆ. ಈ ವಿಷಯದಲ್ಲಿ ಕೇಂದ್ರ ಸರ್ಕಾರ ಮಧ್ಯ ಪ್ರವೇಶಿಸಿ ನಿರ್ದೇಶನ ನೀಡಬೇಕೆಂದು ರಾಜ್ಯಸಭಾ ಸಂಸದ ಈರಣ್ಣ ಕಡಾಡಿ ಅವರು ಸಂಸತ್ತಿನ ಬಜೆಟ್ ಅಧಿವೇಶನದ ಶೂನ್ಯ ವೇಳೆಯಲ್ಲಿ ಆಗ್ರಹಿಸಿದರು.

2023 ರಲ್ಲಿ ಕರ್ನಾಟಕ ಉಚ್ಚ ನ್ಯಾಯಾಲಯವು ಭಯೋತ್ಪಾದನೆ ಮತ್ತು ಸಂಘಟಿತ ಅಪರಾಧಗಳಿಗೆ ಸಂಬಂಧಿಸಿದ ಪ್ರಕರಣಗಳನ್ನು ತ್ವರಿತವಾಗಿ ವಿಚಾರಣೆ ನಡೆಸಲು ರಾಜ್ಯದ ಬೆಳಗಾವಿ, ಮೈಸೂರು ಮತ್ತು ಕಲಬುರಗಿಯಲ್ಲಿ ಆರು ತಿಂಗಳೊಳಗೆ ರಾಷ್ಟ್ರೀಯ ತನಿಖಾ ಸಂಸ್ಥೆ (ಎನ್‌ಐಎ) ವಿಶೇಷ ನ್ಯಾಯಾಲಯಗಳನ್ನು ಸ್ಥಾಪಿಸಬೇಕೆಂದು ಉಚ್ಚ ನ್ಯಾಯಾಲಯವು ಆದೇಶಮಾಡಿದ್ದರೂಕೂಡಾರಾಜ್ಯಸರ್ಕಾರ ಉಚ್ಚ ನ್ಯಾಯಾಲಯದ ಆದೇಶವನ್ನು ಉಲ್ಲಂಘಿಸುತ್ತಿದೆ ಎಂದು ಆರೋಪಿಸಿದರು. ಈಗಾಗಲೇ ಬೆಂಗಳೂರಿನಲ್ಲಿರುವ ವಿಶೇಷ ನ್ಯಾಯಾಲಯದಲ್ಲಿ ಬಹಳ ಒತ್ತಡವಿದ್ದು ಕಳೆದ 8-9 ವರ್ಷಗಳ ಹಳೆಯ ಪ್ರಕರಣಗಳು ಬಾಕಿ ಇರುವುದರಿಂದ ಹೊಸ ನ್ಯಾಯಾಲಯಗಳನ್ನು ಸ್ಥಾಪಿಸಲು ರಾಜ್ಯ ಹೈಕೋರ್ಟ್ ಸೂಚನೆ ನೀಡಿದೆ. ಆದರೆ ರಾಜ್ಯ ಸರ್ಕಾರ ಅದನ್ನು ಜಾರಿಗೆ ತರುವಲ್ಲಿ ವಿಫಲವಾಗಿದೆ ಎಂದರು.

ರಾಜ್ಯ ಸರ್ಕಾರದ ನಿರಾಸಕ್ತಿಯ ಪರಿಣಾಮ ರಾಷ್ಟ್ರ ವಿರೋಧಿಗಳು ಬಹಳಷ್ಟು ಕಡೆ ತಮ್ಮ ಚಟುವಟಿಕೆಗಳನ್ನು ನಡೆಸುತ್ತಿದ್ದಾರೆ. ಈ ಹಿಂದೆಬೆಂಗಳೂರಿನರಾಮೇಶ್ವರಂಕೆಫೆಯಲ್ಲಿ ಬಾಂಬ್ ಸ್ಫೋಟ, ಮಂಗಳೂರಿನಲ್ಲಿ ಕುಕ್ಕರ್ ಬಾಂಬ್ ಸ್ಫೋಟ, ರಾಮನಗರದ ಬಿಡದಿಯಲ್ಲಿರುವ ಆಟೋಮೊಬೈಲ್ ಉತ್ಪಾದನಾ ಕಂಪನಿಯ ಗೋಡೆಯ ಮೇಲೆ ಬರೆಯಲಾದ "ಪಾಕಿಸ್ತಾನ ಜಿಂದಾಬಾದ್" ಘೋಷಣೆಗಳು ಮತ್ತು ಇತ್ತೀಚೆಗೆ ಹಂಪಿಯಲ್ಲಿ ವಿದೇಶಿ ಪ್ರವಾಸಿಗರ ಹತ್ಯೆ, ಮೈಸೂರಿನ ಉದಯಗಿರಿ ಪೊಲೀಸ್ ಠಾಣೆಯ ಮೇಲೆ ದಾಳಿ ನಡೆದಿರುವುದು ಇಂತಹ ಘಟನೆಗಳನ್ನು ಹತೋಟಿಗೆ ತರುವಲ್ಲಿ ರಾಜ್ಯ ಸರ್ಕಾರ ಸಂಪೂರ್ಣ ವಿಫಲವಾಗಿದೆ ಎಂದರು.

ರಾಜ್ಯದಲ್ಲಿ ಕಾಂಗ್ರೆಸ್ ಪಕ್ಷ ಸಂಪೂರ್ಣ ಬಹುಮತದಿಂದ ಗೆದ್ದರೂ ಕೂಡ ಸುಭದ್ರ ಆಡಳಿತ ನೀಡಲು ಸರ್ಕಾರಕ್ಕೆ ಸಾಧ್ಯವಾಗುತ್ತಿಲ್ಲ. ಚಿನ್ನದ ಕಳ್ಳ ಸಾಗಣೆಯಲ್ಲಿ ರಾಜ್ಯ ಸರ್ಕಾರದ ಸಚಿವರು ಭಾಗಿಯಾಗಿದ್ದಾರೆಂಬ ಆರೋಪಗಳು ಕೇಳಿ ಬಂದಿವೆ. ಕಾಂಗ್ರೆಸ್ನ ಹಿರಿಯ ಸಚಿವರೇ ವಿಧಾನಸಭೆಯಲ್ಲಿ 48 ನಾಯಕರ ಮೇಲೆ ಹನಿಟ್ರ್ಯಾಪ್ ಮಾಡಲಾಗಿದೆ ಮತ್ತು ಸ್ವತ:ಹ ತನ್ನ ಮೇಲೆಯೂ ಕೂಡಾ ಹನಿಟ್ರ್ಯಾಪ್ ಮಾಡಲಾಗಿದೆ ಎಂದು ತಕ್ರಾರು ಕೊಟ್ಟಿದ್ದಾರೆ. ರಾಜ್ಯ ಸರ್ಕಾರದ ಸಚಿವರಿಗೆನೇ ರಕ್ಷಣೆ ಇಲ್ಲವೆಂದರೆ ಇನ್ನು ಸಾಮಾನ್ಯ ಜನರಿಗೆ ರಕ್ಷಣೆ ಕೊಡಲು ಹೇಗೆ ಸಾಧ್ಯ. ಈ ಎಲ್ಲ ಘಟನೆಗಳ ಹಿನ್ನೆಲೆಯಲ್ಲಿ ಕೇಂದ್ರ ಸರ್ಕಾರ ಇದನ್ನು ಗಂಭೀರವಾಗಿ ಪರಿಗಣಿಸಿ ರಾಜ್ಯ ಸರ್ಕಾರಕ್ಕೆ ಒಂದು ಸ್ಪಷ್ಟವಾದ ನಿರ್ದೇಶನ ನೀಡಬೇಕು. ವಿಶೇಷ ನ್ಯಾಯಾಲಯಗಳ ಸ್ಥಾಪನೆಯಾಗಬೇಕು ಹಾಗೂ ಕಾನೂನು ಸುವ್ಯವಸ್ಥೆಯನ್ನು ಹತೋಟಿಗೆ ತರಲು ಕೇಂದ್ರ ಸರ್ಕಾರ ಮಧ್ಯಸ್ಥಿಕೆ ವಹಿಸಿ ರಾಜ್ಯ ಸರ್ಕಾರಕ್ಕೆ ಸೂಕ್ತ ನಿರ್ದೇಶನ ನೀಡಬೇಕೆಂದು ಆಗ್ರಹಿಸಿದರು.

# ಕಡಕೋಳ ಪುನರ್ವಸತಿಯಲ್ಲಿ ನೀರಿಗಾಗಿ ಹಾಹಾಕಾರ: ನಿವಾಸಿಗಳ ಆಕ್ರೋಶ





**ಜಮಖಂಡಿ :** ನಗರದ ಕಡಕೋಳ ರಸ್ತೆ ಪಕ್ಕದಲ್ಲಿರುವ ಕಡಕೋಳ ಪುನರ್ವಸತಿ ಕೇಂದ್ರದಲ್ಲಿ ನೀರಿನ ವ್ಯವಸ್ಥೆ ಸ್ಥಗಿತಗೊಂಡಿದೆ. ಬೇಸಿಗೆ ಕಾಲದಲ್ಲಿ ಹನಿ ನೀರಿಗೂ ಪರದಾಡುವ ಸ್ಥಿತಿಯಿದೆ. ಕಡಕೋಳ ಗ್ರಾಮ ಕೃಷ್ಣಾ ಮೇಲ್ದಂಡೆ ಯೋಜನೆಯಲ್ಲಿ ಮುಳುಗಡೆಯಾಗುತ್ತದೆ ಎಂದು ಪುನರ್ವಸತಿ ಕೇಂದ್ರವನ್ನು ನಿರ್ಮಿಸಿಕೊಡಲಾಗಿದೆ.

ಗ್ರಾಮದ ಬಹುತೇಕ ಬಡವರು ಜಮೀನುಗಳಿಲ್ಲದವರು ದಲಿತ ವರ್ಗದವರೇ ಪುನರ್ವಸತಿ ಕೇಂದ್ರದಲ್ಲಿ ಹೆಚ್ಚಾಗಿ ವಾಸವಾಗಿದ್ದಾರೆ. ಜಮೀನುಗಳು ಉಳ್ಳವರು ತಮ್ಮ ಜಮೀನುಗಳಲ್ಲಿ ಮನೆಗಳನ್ನು ಕಟ್ಟಿಕೊಂಡು ವಾಸವಾಗಿರುವುದರಿಂದ ಪುನರ್ವಸತಿ ಕೇಂದ್ರದಾದ್ಯಂತ ಜಾಲಿಗಿಡಗಳು ಬೃಹತ್ ಪ್ರಮಾಣದಲ್ಲಿ ಬೆಳೆದಿವೆ.

ಕೆಲ ರಸ್ತೆಗಳನ್ನು ಮಾತ್ರ ಪಕ್ಕಾ ರಸ್ತೆಗಳನ್ನಾಗಿ ನಿರ್ಮಿಸಲಾಗಿದೆ. ಉಳಿದೆಲ್ಲವೂ ಕಚ್ಚಾ ರಸ್ತೆಗಳು. ರಾಷ್ಟ್ರೀಯ ಜಲಜೀವನ ಮಿಷನ್ ಹಾಗೂ ಜಿಲ್ಲಾ ಪಂಚಾಯತ್ ನಿಂದ ನಿರ್ಮಿಸಲಾದ ಜಲ ಸಂಗ್ರಹಗಾರಗಳು, ಗ್ರಾಮೀಣಾಭಿವೃದ್ಧಿ ಪಂಚಾಯತ ಇಲಾಖೆಯಿಂದ ನಿರ್ಮಿಸಲಾದ ದೇವರಾಜ ಅರಸು ಶುದ್ಧ ನೀರಿನ ಘಟಕಗಳು ಮುಚ್ಚಲ್ಪಟ್ಟಿವೆ.

ಅಂದಾಜು ಇಪ್ಪತ್ತಕ್ಕೂ ಹೆಚ್ಚು ಕೊಳವೆ ಬಾವಿಗಳನ್ನು ತೋಡಿಸಲಾಗಿದ್ದರೂ ಕೂಡ ಕೆಲವು ಮಾತ್ರ ಚಾಲ್ತಿಯಲ್ಲಿವೆ. ಉಳಿದ ಕೊಳವೆ ಬಾವಿಗಳ ಪಂಪುಗಳು ದುರಸ್ತಿಯಲ್ಲಿವೆ.

ನಿವಾಸಿಗಳು ಹಲವು ಬಾರಿ ಜಿಲ್ಲಾಧಿಕಾರಿಗಳಿಗೆ, ನಗರಸಭೆ ಮತ್ತು ಗ್ರಾಮ ಪಂಚಾಯತ್ ಅಧಿಕಾರಿಗಳನ್ನು ಸಂಪರ್ಕಿಸಿ ನೀರಿನ ತೊಂದರೆ ಸರಿ ಪಡಿಸುವಂತೆ ಮನವಿ ಸಲ್ಲಿಸಿದ್ದರೂ ಯಾವುದೇ ಪ್ರಯೋಜನ ಆಗಿಲ್ಲ.

ಪುನರ್ವಸತಿ ಕೇಂದ್ರದಲ್ಲಿ ವಾಸವಿರುವ ನಿವಾಸಿಗಳಲ್ಲಿ ಹೆಚ್ಚಿನವರು ಕಾರ್ಮಿಕರು, ಕೃಷಿ ಕೆಲಸದವರು.

ಇನ್ನು ಕೆಲವರು ವಿವಿಧ ರೀತಿಯ ಕೆಲಸಕ್ಕೆ ತೆರಳುತ್ತಾರೆ. ಬೆಳಗಿನಿಂದ ಸಂಜೆಯವರೆಗೆ ಕೆಲಸಕ್ಕೆ ತೆರಳಿ ಮರಳಿ ಸಾಯಂಕಾಲ ಬಂದು ಕೊಳವೆ ಬಾವಿ ಮನೆಗಳ ಮಾಲಿಕರಲ್ಲಿ ಅಂಗಲಾಚಿ ನೀರು ತರಬೇಕಾದ ದಾರುಣ ಸ್ಥಿತಿ ಎದುರಾಗಿದೆ. ಜಲ ಜೀವನ ಮಿಷನ್ ಅಧಿಕಾರಿಗಳನ್ನು ಸಂಪರ್ಕಿಸಿದಾಗ ನದಿಯಲ್ಲಿ ನೀರಿಲ್ಲ.

ನದಿಗೆ ನೀರು ಬಂದಮೇಲೆ ನೀರು ಬಿಡುವದಾಗಿ ಹೇಳುತ್ತಿದ್ದಾರೆ.

ಪಂಚಾಯಿತಿಯವರು ಪುನರ್ವಸತಿ ಕೇಂದ್ರ ಜಮಖಂಡಿ ನಗರಸಭೆ ವ್ಯಾಪ್ತಿಗೆ ಬರುತ್ತದೆ. ಅಲ್ಲಿಯೇ ವಿಚಾರಿಸಿ ಎಂದು ಹೇಳಿ ಕೈ ತೊಳೆದುಕೊಳ್ಳುತ್ತಿದ್ದಾರೆ. ಇವರಿಬ್ಬರ ತಿಕ್ಕಾಟದಲ್ಲಿ ನಾವು ಎಲ್ಲಿಗೆ ಹೋಗಬೇಕು, ಯಾರನ್ನು ಕೇಳಬೇಕು ಎಂದು ನಿವಾಸಿಗಳು ಪ್ರಶ್ನಿಸುತ್ತಿದ್ದಾರೆ. ಮಕ್ಕಳು ಇರುವವರ ಮನೆಗಳಲ್ಲಿ ಕಿ. ಮಿ. ಗಟ್ಟಲೆ ದೂರಕ್ಕೆ ಹೋಗಿ ನೀರು ತಂದುಕೊಳ್ಳುತ್ತಾರೆ. ವಯೋವೃದ್ಧರು ಮಾತ್ರವಿರುವ ಕುಟುಂಬಗಳು ತೊಂದರೆ ಅನುಭವಿಸುತ್ತಿವೆ.

ರಸ್ತೆಗಳು ಕೆಟ್ಟು ಹೋಗಿವೆ. ಸ್ವಲ್ಪ ಮಳೆಯಾದರೂ ಸಂಚಾರಕ್ಕೆ ತೊಂದರೆಯಾಗುತ್ತದೆ. ಎಲ್ಲ ಕಡೆಯಲ್ಲಿ ಜಾಲಿ ಮುಳ್ಳಿನ ಕಂಟಿಗಳು ಬೆಳೆದಿದ್ದು ಹಲವು ಸರ್ಕಾರಿ ಕಟ್ಟಡಗಳು ಪಾಳು ಬಿದ್ದಿವೆ. ಪುನರ್ವಸತಿ ಕೇಂದ್ರದ ಸ್ಥಿತಿ ಹದಗೆಟ್ಟು ಹೋಗಿದ್ದು ಹಿರಿಯ ಅಧಿಕಾರಿಗಳು, ಜನಪ್ರತಿ ನಿಧಿಗಳು ತಮ್ಮ ಸಮಸ್ಯೆಗಳನ್ನು ಬಗೆ ಹರಿಸಬೇಕು ಎಂದು ನಿವಾಸಿಗಳಾದ ಸತ್ಯವ್ವ ಗಸ್ತಿ, ಸುಶಿಲವ್ವ ಗಸ್ತಿ, ಶ್ರೀಪತಿ ಕೆಳಗಡೆ, ನಿಜಗುಣಿ ಕೆಳಗಡೆ, ಸತ್ಯವ್ವ ಯಂಕಂಚಿ ಮೊದಲಾದವರು ಒತ್ತಾಯಿಸಿದ್ದಾರೆ.

> **ನಮ್ಮ ಇಲಾಖೆಗೆ ನೀರು ಸರಬುರಾಜು ಉಸ್ತುವಾರಿ ಮಾತ್ರ ಇರುತ್ತದೆ. ನಗರಸಭೆಯವರು ಒದಗಿಸುವ ನೀರನ್ನು ಸರಿಯಾಗಿ ಸರಬರಾಜು ಮಾಡಲಾಗುತ್ತದೆ. ನಗರಸಭೆಯವರು ಹೆಚ್ಚಿಗೆ ನೀರು ಪೂರೈಸಿದರೆ ನಮಗೆ ಅನುಕೂಲ ಆಗುತ್ತದೆ. ಸಧ್ಯದ ಪರಿಸ್ಥಿತಿಯಲ್ಲಿ ಕೆಲ ಕೊಳವೆ ಬಾವಿಗಳ ನೀರನ್ನು ಬಳಸಿಕೊಂಡು ಪೂರೈಸಲಾಗುತ್ತಿದೆ.**
>
> **। ಪಾಂಚಾಳ ಎ.ಇ.ಇ. ಗ್ರಾಮೀಣ ಕುಡಿಯುವ ನೀರು ಹಾಗೂ ನೈರ್ಮಲ್ಯ ಇಲಾಖೆ, ಜಮಖಂಡಿ.**

> **ನಗರಸಭೆ ವತಿಯಿಂದ ಕೊಳವೆ ಬಾವಿಗಳ ದುರಸ್ತಿ ಕಾರ್ಯ ಕೈಗೆತ್ತಿಕೊಳ್ಳಲಾಗಿದೆ. ನೀರಿನ ಸರಬರಾಜಿಗೆ ತೊಂದರೆಯಾಗದಂತೆ ಕ್ರಮ ಜರುಗಿಸಲು ಪೌರಾಯುಕ್ತ ಜ್ಯೋತಿ ಗಿರೀಶ ಆದೇಶ ನೀಡಿದ್ದು, ಜನವಸತಿ ಹತ್ತಿರವಿರುವ ಕೊಳವೆ ಬಾವಿಗಳ ದುರಸ್ತಿ ಕಾರ್ಯ ನಡೆದಿದೆ. ಪುನರ್ವಸತಿ ಕೇಂದ್ರದಲ್ಲಿರುವ ಬಾವಿಯೊಂದನ್ನು ಸ್ವಚ್ಛಗೊಳಿಸಲು ನಿವಾಸಿಗಳು ಮನವಿ ಸಲ್ಲಿಸಿದ್ದು ಒಂದೆರಡು ದಿನದಲ್ಲಿ ಬಾವಿಯ ಸ್ವಚ್ಛತಾ ಕಾರ್ಯವು ನಡೆಯಲಿದ್ದು ಕೇಂದ್ರದ ನಿವಾಸಿಗಳಿಗೆ ನೀರಿನ ತೊಂದರೆಯಾಗದಂತೆ ಕ್ರಮ ಜರುಗಿಸಲಾಗುವದು.-**
>
> **। ಯಲ್ಲಪ್ಪ ಬಿದರಿ, ವ್ಯವಸ್ಥಾಪಕರು, ನಗರಸಭೆ ಜಮಖಂಡಿ.**

## ರಸ್ತೆ ಒತ್ತುವರಿ: ಕಟ್ಟಡ ತೆರವು ಕಾರ್ಯಾಚರಣೆ



**ಮಹಾಲಿಂಗಪುರ :** ಪಟ್ಟಣದ ಬಸ್ ನಿಲ್ದಾಣದಿಂದ ರಬಕವಿ ರಸ್ತೆಯ ದ್ವಾರ ಬಾಗಿಲುವರೆಗೆ ನಡೆದಿರುವ ರಸ್ತೆ ವಿಸ್ತರಣೆ ಕಾಮಗಾರಿಯಲ್ಲಿ ಒತ್ತುವರಿ ಆಗಿರುವ ಕಟ್ಟಡಗಳನ್ನು ಪುರಸಭೆ ವತಿಯಿಂದ ತೆರವು ಗೊಳಿಸಲಾಯಿತು. ಲೋಕೋಪಯೋಗಿ ಇಲಾಖೆ ವತಿಯಿಂದ ರಸ್ತೆ ವಿಸ್ತರಣೆ ಕಾಮಗಾರಿ ನಡೆಯುತ್ತಿದ್ದು, ರಸ್ತೆ ಬದಿಯಲ್ಲಿದ್ದ ಗೂಡಂಗಡಿ, ಮರಗಳನ್ನು ಈಗಾಗಲೇ ತೆರವುಗೊಳಿಸಲಾಗಿದೆ. ಪುರಸಭೆ ಮುಖ್ಯಾಧಿಕಾರಿ ಈರಣ್ಣ ದಡ್ಡಿ ನೇತೃತ್ವದಲ್ಲಿ ಹಿಟಾಚಿ ಮೂಲಕ ಕಾರ್ಯಾಚರಣೆ ನಡೆಸಿ ಗಿರಿಮಲ್ಲೇಶ್ವರ ಆಶ್ರಮದ ಬಳಿ ಒತ್ತುವರಿ ಆಗಿರುವ ಕಟ್ಟಡಗಳನ್ನು ನೆಲಸಮ ಮಾಡಲಾಯಿತು.

ಲೋಕೋಪಯೋಗಿ ಇಲಾಖೆ ಎ.ಇ. ಸರ್ದಾರ ಅಲಿ ಮುಜಾವರ, ಪುರಸಭೆ ಅಧಿಕಾರಿಗಳಾದ ಎಸ್. ಎಂ.ಕಲಬುರಗಿ, ಎಸ್.ಎನ್.ಪಾಟೀಲ, ಎಂ. ಎಂ. ಮುಗಳಖೋಡ ಹಾಜರಿದ್ದರು.

## ಗಿರಿಸಾಗರದಲ್ಲಿ ಮಹಿಳಾ ದಿನಾಚರಣೆ




**ಬೀಳಗಿ :** ತಾಲೂಕಿನ ಗಿರಿಸಾಗರ ಗ್ರಾಮದಲ್ಲಿ ಗ್ರಾಮೀಣಾಭಿವೃದ್ಧಿ ಪಂಚಾಯತ ರಾಜ್ ಇಲಾಖೆ, ಜಿಲ್ಲಾ ಪಂಚಾಯತ್, ತಾಲೂಕು ಪಂಚಾಯತ್ ಹಾಗೂ ಗ್ರಾಮ ಪಂಚಾಯತ್ ಇವರ ಸಂಯುಕ್ತ ಆಶ್ರಯದಲ್ಲಿ ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆ ಆಚರಿಸಲಾಯಿತು. ಅದರ ಅಂಗವಾಗಿ ಮಹಿಳಾ ಗ್ರಾಮಸಭೆ, ಕ್ರೀಡಾಕೂಟ, ಸಾಂಸ್ಕೃತಿಕ ಕಾರ್ಯಕ್ರಮ ಮತ್ತು ಪ್ರಶಸ್ತಿ ಪ್ರದಾನ ಸಮಾರಂಭ ಜರುಗಿತು.

ಗ್ರಾಮ ಪಂಚಾಯತ್ ಅಭಿವೃದ್ಧಿ ಅಧಿಕಾರಿ ವಿಮಲಾ ಕಲ್ಮಣಿ ಪ್ರಾಸ್ತಾವಿಕವಾಗಿ ಮಾತನಾಡಿ, ಮಹಿಳಾ ಗ್ರಾಮಸಭೆ, ಮಹಿಳಾ ದಿನಾಚರಣೆಗಳ ಮೂಲಕ ಮಹಿಳೆಗೆ ಅವಕಾಶ ಕಲ್ಪಿಸುವ, ಗೌರವಿಸುವ, ಸಮಯ ಕೊಡುವ ಮಹಿಳೆಯ ಮಾತಿಗೆ ಕಿವಿಯಾಗುವ ಮಹಿಳೆಯ ಸಮಸ್ಯೆಗೆ ಪರಿಹಾರವಾಗುವ, ಆಕೆಯ ಪ್ರತಿಭೆಯನ್ನು ಗುರುತಿಸಿ ಪ್ರೋತ್ಸಾಹಿಸಿ ಬೆಳೆಸುವ ಕಾರ್ಯವಾಗಬೇಕು ಎಂದರು.

ಬಸವರಾಜ ಹೂಗಾರ ಮಾತನಾಡಿ, ಈ ದೇಶದ ಮೊದಲ ಶಿಕ್ಷಕಿ ಸಾವಿತ್ರಿಬಾಯಿ ಫುಲೆ ಹಾಗೂ ಮಹಾತ್ಮಾ ಜ್ಯೋತಿಬಾ ಫುಲೆ ಸಮಾಜದ ವಿರೋಧದ ನಡುವೆಯೂ ದಂಪತಿಗಳ ಸಮಾಜ ಸೇವೆಯನ್ನು ಜನರಿಗೆ ಮನ ಮುಟ್ಟುವಂತೆ ಮಾಡಿದರು.

ಜಿಲ್ಲಾ ಪಂಚಾಯತ್ ಎನ್‌ಆರ್‌ಎಲ್‌ಎಂನ ಅಧಿಕಾರಿ ಭೀಮಾನಂದ ಶೆಟ್ಟರ ಮಾತನಾಡಿ, ಮಹಿಳೆಯರು ಸರಕಾರದ ಎಲ್ಲ ಯೋಜನೆಗಳ ಲಾಭ ಪಡೆದು ಆರ್ಥಿಕವಾಗಿ, ಸಾಮಾಜಿಕವಾಗಿ ಸದೃಢರಾಗಬೇಕು ಎಂದು ಹೇಳಿದರು.

ತಾಲೂಕು ಪಂಚಾಯತ್ ಮಾಜಿ ಸದಸ್ಯ ಶ್ರೀಕಾಂತ ಸಂದಿಮನಿ, ಗ್ರಾಮ ಪಂಚಾಯತ್ ಸದಸ್ಯೆ ಭವ್ಯಾ ಮುತ್ತಗಿ, ಮಹಿಳೆ ಇಂದು ಎಲ್ಲ ಕ್ಷೇತ್ರದಲ್ಲಿ ಮೇಲುಗೈ ಸಾಧಿಸಿದ್ದು, ಪ್ರತಿಯೊಬ್ಬರ ಜೀವನದಲ್ಲಿ ಹೆಣ್ಣು ತಾಯಿ, ಸಹೋದರಿ, ಮಡದಿ, ಮಗಳು, ಸ್ನೇಹಿತೆ ಹೀಗೆ ಹಲವಾರು ರೀತಿಯಲ್ಲಿ ಎಲ್ಲರ ಜೀವನವನ್ನು ಸುಂದರಗೊಳಿಸಿದ್ದಾಳೆ ಎಂದರು.

ಉಪನ್ಯಾಸಕಿ ಶಶಿಕಲಾ ಜೋಳದ ಉಪನ್ಯಾಸ ನೀಡಿದರು. ಕಲ್ಯಾಣ ಹಿರೇಮಠದ ರುದ್ರಮುನಿ ಶಿವಾಚಾರ್ಯ ಸ್ವಾಮೀಜಿ ಸಾನ್ನಿಧ್ಯ ವಹಿಸಿ ಆಶೀರ್ವಚನ ನೀಡಿದರು.

ಮ್ಯೂಸಿಕಲ್ ಚೇರ್, ಬ್ಯಾಲನ್ಸ್ ದ ಬಲೂನ, ಚೌಕಬಾಕ್ಸ್ ಆಟ, ತಲೆಮೇಲೆ ತಂಬಿಗೆ ಹೊತ್ತು ಗುರಿ ಮುಟ್ಟುವುದು, ಲೆಮನ್ ಮತ್ತು ಸ್ಪೂನ್, ರಂಗೋಲಿ ಸ್ಪರ್ಧೆಗಳಲ್ಲಿ ಮಹಿಳೆಯರು ಪಾಲ್ಗೊಂಡು ಸಂಭ್ರಮಿಸಿದರು. ವಿಜೇತರಿಗೆ ಬಹುಮಾನ ವಿತರಿಸಲಾಯಿತು.

ಗ್ರಾಮದಲ್ಲಿ ಕಾರ್ಯನಿರ್ವಹಿಸುತ್ತಿರುವ ಎಲ್ಲ ಇಲಾಖೆಗಳ ಮಹಿಳಾ ನೌಕರರಿಗೆ ಮಹಿಳಾ ಒಕ್ಕೂಟದ ಸದಸ್ಯರು, ಸಿಬ್ಬಂದಿಗಳನ್ನು ಸನ್ಮಾನಿಸಿದರು.

ಗ್ರಾಮ ಪಂಚಾಯತ್ ಅಧ್ಯಕ್ಷೆ ಶಾಂತಾ ಬಂಡಿವಡ್ಡರ, ಉಪಾಧ್ಯಕ್ಷ ಬನ್ನಪ್ಪ ರಾಜೋಗಿ, ತಾಲೂಕು ಪಂಚಾಯತ್ ಮಾಜಿ ಅಧ್ಯಕ್ಷೆ ಸುಜಾತಾ ಘಾಟೆ, ಸದಸ್ಯರಾದ ರುದ್ರಪ್ಪ ಲಾಯದಗುಂದಿ, ಗುಂಡಪ್ಪ ಕಾಳಪ್ಪಗೋಳ, ಯಂಕಪ್ಪ ನುಚ್ಚಿನ, ಭೀಮಪ್ಪ ಹರದೊಳ್ಳಿ, ಯಂಕಪ್ಪ ಮಾದರ, ಯಲ್ಲಪ್ಪ ಅರಮನೆ, ನಾಗರತ್ನ ಅಗ್ನಿ, ಭವ್ಯಾ ಮುತ್ತಿಗಿ, ಹುಸೇನಬಿ ನದಾಫ, ಮಹಾದೇವಿ ನಾಯ್ಕರ, ಶೇಖರ ಕಮತಗಿ, ಭಾರತಿ ಗದಗ, ಗ್ರಾಮ ಪಂಚಾಯತ್ ಕಾರ್ಯದರ್ಶಿ ಕೆ. ಎಸ್. ನದಾಫ, ಶಶಿಕಾಂತ ಮುಳವಾಡ, ವಿಜಯಲಕ್ಷ್ಮಿ ಮಾದರ, ಸಿದ್ದಮ್ಮ ಮಾದರ ಹಾಗೂ ಎಲ್ಲ ಶಾಲೆಗಳ ಮುಖ್ಯ ಗುರುಗಳು ಉಪಸ್ಥಿತರಿದ್ದರು.

## ಯುಗಾದಿ ಕವಿಗೋಷ್ಠಿ ಇಂದು

**ರಬಕವಿ :** ಕನ್ನಡ ಸಾಹಿತ್ಯ ಪರಿಷತ್ತು ಜಿಲ್ಲಾ ಘಟಕ ಬಾಗಲಕೋಟೆ, ತಾಲ್ಲೂಕು ಘಟಕ ರಬಕವಿ-ಬನಹಟ್ಟಿ, ವಲಯಗಳು ತೇರದಾಳ, ಮಹಾಲಿಂಗಪುರ, ರಬಕವಿಯ ದಾನಮ್ಮದೇವಿ ದೇವಸ್ಥಾನ ಟ್ರಸ್ಟ್ ಕಮೀಟಿ ಹಾಗೂ ಕರ್ನಾಟಕ ರಾಜ್ಯ ನಿವೃತ್ತ ನೌಕರರ ಸಂಘ ತಾಲೂಕಾ ಘಟಕ ರಬಕವಿ-ಬನಹಟ್ಟಿ ಇವರ ಸಂಯುಕ್ತಾಶ್ರಯದಲ್ಲಿ ರಬಕವಿಯ ದಾನಮ್ಮದೇವಿ ದೇವಸ್ಥಾನದ ಸಭಾ ಭವನದಲ್ಲಿ ಮಾರ್ಚ 30ರಂದು ಸಂಜೆ 5-30 ಕ್ಕೆ "ಯುಗಾದಿ ಕವಿಗೋಷ್ಠಿ" ಹಮ್ಮಿಕೊಳ್ಳಲಾಗಿದೆಯೆಂದು ಕಸಾಪ ಪ್ರಕಟನೆ ತಿಳಿಸಿದೆ. ಹಿರಿಯ ಸಾಹಿತಿ, ನಾಟಕಕಾರರಾದ ಬನಹಟ್ಟಿಯ ಬಿ. ಆರ್. ಪೊಲೀಸ್ ಪಾಟೀಲ ಅಧ್ಯಕ್ಷತೆ ವಹಿಸುವರು.

ಮಹಾಲಿಂಗಪುರದ ಮಕ್ಕಳ ಸಾಹಿತಿ ಅಣ್ಣಾಜಿ ಫಡತಾರೆ ಕವಿಗೋಷ್ಠಿ ಉದ್ಘಾಟಿಸುವರು. ಹಿರಿಯ ಸಾಹಿತಿ ಜಿ. ಎಸ್. ವಡಗಾಂವಿ ಆಶಯ ನುಡಿಗಳನ್ನಾಡುವರು.

ಜಿಲ್ಲಾ ಕಸಾಪ ಅಧ್ಯಕ್ಷ ಶಿವಾನಂದ ಶೆಲ್ಲಿಕೇರಿ ಅವರು ರಬಕವಿ-ಬನಹಟ್ಟಿ ತಾಲೂಕಾ ಎರಡನೇ ಕನ್ನಡ ಸಾಹಿತ್ಯ ಸಮ್ಮೇಳನದ ಸ್ಮರಣ ಸಂಚಿಕೆ ವಿತರಿಸುವರು. ಮುಖ್ಯ ಅತಿಥಿಗಳಾಗಿ ಶ್ರೀ ದಾನಮ್ಮದೇವಿ ದೇವಸ್ಥಾನ ಟ್ರಸ್ಟ್ ಕಮೀಟಿ ಅಧ್ಯಕ್ಷ ಶಿವಜಾತ ಉಮದಿ, ಕರ್ನಾಟಕ ರಾಜ್ಯ ನಿವೃತ್ತ ನೌಕರರ ಸಂಘ ರಬಕವಿ-ಬನಹಟ್ಟಿ ತಾಲೂಕಾ ಘಟಕದ ಅಧ್ಯಕ್ಷ ಮೃತ್ಯುಂಜಯ ರಾಮದುರ್ಗ, ಬನಹಟ್ಟಿಯ ಶ್ರೀಮತಿ ವಾಣಿಶ್ರೀ ಹೂಲಿ, ರಬಕವಿ-ಬನಹಟ್ಟಿ ತಾಲೂಕಾ ಕಾನಿಪ ಅಧ್ಯಕ್ಷ ವಿಶ್ವಜ ಕಾಡದೇವರ ಆಗಮಿಸುವರು. ರಬಕವಿ-ಬನಹಟ್ಟಿ ತಾಲೂಕಾ ಕಸಾಪ ಅಧ್ಯಕ್ಷ ಮ. ಕೃ. ಮೇಗಾಡಿ, ತೇರದಾಳ ವಲಯ ಅಧ್ಯಕ್ಷ ಗಂಗಾಧರ ಮೋಪಗಾರ, ಮಹಾಲಿಂಗಪುರ ವಲಯ ಅಧ್ಯಕ್ಷ ಬಸವರಾಜ ಮೇಟಿ ಉಪಸ್ಥಿತರಿರುವರು. ಕವಿಗೋಷ್ಠಿಯಲ್ಲಿ ಶಿವಾನಂದ ದಾಶಾಳ, ಎಂ. ಎಸ್. ಬದಾಮಿ, ಶಿವಾನಂದ ಬಾಗಲಕೋಟಮಠ, ಯಶವಂತ ವಾಜಂತ್ರಿ, ಗಂಗಾಧರ ಮೋಪಗಾರ, ಡಾ. ಮಹಾದೇವ ಪೋತರಾಜ, ಗುರುರಾಜ ಖಾಸನೀಸ, ದಾಕ್ಷಾಯಣಿ ಮಂಡಿ, ರವೀಂದ್ರ ಅಷ್ಟಗಿ, ಸ್ಮಿತಾ ಪಾವಟೆ, ಶೋಭಾ ಅರಬಳ್ಳಿ, ವಾಣಿಶ್ರೀ ಜುಂಜಪ್ಪನವರ, ಪ್ರಭಾಕರ ಶಿವಶಿಂಪಿ, ಪಿ. ಎಸ್. ನರಸಣ್ಣವರ, ಹುಮಾಯುನ್ ಇ. ಸುತಾರ, ರಮೇಶ ಕೊಣ್ಣೂರ, ಬಸಯ್ಯ ವಸ್ತ್ರದ, ಸ್ವಾತಿ ಮಡ್ಡಗೋಳ, ಸುನೀಲ ಮಾಂಗ, ದಿವ್ಯಾ ರಾವಳ ಭಾಗವಹಿಸುವರು.

## ಡಾ. ಜಗಜೀವನರಾಂ, ಡಾ.ಅಂಬೇಡ್ಕರ ಜಯಂತಿ ಅರ್ಥಪೂರ್ಣ ಆಚರಣೆ ನಿರ್ಧಾರ



**ಬಾಗಲಕೋಟೆ :** ಜಿಲ್ಲೆಯಲ್ಲಿ ಎಪ್ರೀಲ್ 4 ರಂದು ಆಚರಿಸಲ್ಪಡುವ ಡಾ.ಬಾಬು ಜಗಜೀವನರಾಂ ಅವರ 118ನೇ ಜಯಂತಿ ಹಾಗೂ ಎಪ್ರೀಲ್ 14 ರಂದು ಆಚರಿಸಲ್ಪಡುವ ಡಾ.ಬಿ.ಆರ್.ಅಂಬೇಡ್ಕರವರ 134ನೇ ಜಯಂತಿಯನ್ನು ಜಿಲ್ಲಾಡಳಿತದಿಂದ ಅದ್ದೂರಿ ಹಾಗೂ ಅರ್ಥಪೂರ್ಣವಾಗಿ ಆಚರಿಸಲು ನಿರ್ಧರಿಸಲಾಗಿದೆ ಎಂದು ಜಿಲ್ಲಾಧಿಕಾರಿ ಜಾನಕಿ ಕೆ.ಎಂ ಹೇಳಿದರು.

ಜಿಲ್ಲಾ ಪಂಚಾಯತ ಸಭಾಭವನದಲ್ಲಿಂದು ಜರುಗಿದ ಡಾ.ಬಾಬು ಜಗಜೀವನರಾಂ ಹಾಗೂ ಡಾ. ಬಿ.ಆರ್. ಅಂಬೇಡ್ಕರವರ ಜಯಂತಿ ಆಚರಣೆ ಕುರಿತು ಪೂರ್ವ ಸಿದ್ದತಾ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು ಎಪ್ರೀಲ್ 4 ರಂದು ಬೆಳಿಗ್ಗೆ 9 ಗಂಟೆಗೆ ಸೆಕ್ಟರ ನಂ.12ರಲ್ಲಿರುವ ದುರ್ಗಾದೇವಿ ದೇವಸ್ಥಾನದಿಂದ ಜಗಜೀವನರಾಂ ಭವನದ ವರೆಗೆ ಭಾವಚಿತ್ರದ ಮೆರವಣಿಗೆ ನಡೆಯಲಿದ್ದು, ಜಗಜೀವರಾಂ ಭವನದಲ್ಲಿ ಉಪನ್ಯಾಸ ಒಳಗೊಂಡಂತೆ ವೇದಿಕೆ ಕಾರ್ಯಕ್ರಮ ಹಮ್ಮಿಕೊಳ್ಳಲಾಗುವುದು. ಜಗಜೀವನರಾಂ ಅವರ ಕುರಿತು ಮಾತನಾಡಲು ಉತ್ತಮ ಉಪನ್ಯಾಸಕರನ್ನು ಆಹ್ವಾನಿಸಲು ತಿಳಿಸಿದರು.

ಡಾ. ಬಿ.ಆರ್. ಅಂಬೇಡ್ಕರವರ ಜಯಂತಿಯನ್ನು ಎಪ್ರೀಲ್ 14 ರಂದು ಬೆಳಿಗ್ಗೆ 10 ಗಂಟೆಗೆ ಸೆಕ್ಟರ ನಂ.45ರಲ್ಲಿರುವ ಶ್ರೀ ಮಾತೆ ರಮಾಬಾಯಿ ಅಂಬೇಡ್ಕರ ಸಮುದಾಯ ಭವನದ ಆವರಣದಲ್ಲಿ ಅಂಬೇಡ್ಕರವರ ಭಾವಚಿತ್ರಕ್ಕೆ ಪೂಜೆ ಸಲ್ಲಿಸಿ, ವಿವಿಧ ಜಾನಪದ ಕಲಾತಂಡಗಳ ಮೂಲಕ ಮೆರವಣಿಗೆಗೆ ಚಾಲನೆ ನೀಡಲಾಗುತ್ತದೆ. ನಂತರ ಅಂಬೇಡ್ಕರ ಭವನದಲ್ಲಿ ವೇದಿಕೆ ಕಾರ್ಯಕ್ರಮ ನಡೆಸಲಾಗುತ್ತದೆ. ಅಂಬೇಡ್ಕರವರ ಜೀವನ ಚರಿತ್ರೆಯ ಕುರಿತು ಮಾತನಾಡಲು ಉತ್ತಮ ಉಪನ್ಯಾಸಕರನ್ನು ಆಹ್ವಾನಿಸುವಂತೆ ಅಧಿಕಾರಿಗಳಿಗೆ ತಿಳಿಸಲಾಯಿತು.

ಡಾ.ಜಗಜೀವನರಾಂ ಹಾಗೂ ಡಾ.ಅಂಬೇಡ್ಕರವರ ಜಯಂತಿ ಕಾರ್ಯಕ್ರಮಕ್ಕೆ ಜಿಲ್ಲಾ ಮಟ್ಟದ ವಿವಿಧ ಇಲಾಖೆಯ ಅಧಿಕಾರಿಗಳು ಕಡ್ಡಾಯವಾಗಿ ಪಾಲ್ಗೊಳ್ಳಬೇಕು. ಅಲ್ಲದೇ ಸಮುದಾಯದ ವಿವಿಧ ಸಂಘಟನೆಯ ಮುಖಂಡರು, ಸಾರ್ವಜನಿಕರು, ವಿವಿಧ ಸಂಘ ಸಂಸ್ಥೆಗಳ ಪದಾಧಿಕಾರಿಗಳು ಪಾಲ್ಗೊಂಡು ಕಾರ್ಯಕ್ರಮ ಯಶಸ್ವಿಗೊಳಿಸುವಂತೆ ಜಿಲ್ಲಾಧಿಕಾರಿ ಗಳು ಕೋರಿದರು.

ಸಭೆಯಲ್ಲಿ ಜಿಲ್ಲಾಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಶಶಿಧರ ಕುರೇರ, ಅಪರ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಪ್ರಸನ್ನ ದೇಸಾಯಿ, ಸಮಾಜ ಕಲ್ಯಾಣ ಇಲಾಖೆಯ ಉಪನಿರ್ದೇಶಕ ಸದಾಶಿವ ಬಡಿಗೇರ, ತಹಶೀಲ್ದಾರ ಅಮರೇಶ ಪಮ್ಮಾರ ಸೇರಿದಂತೆ ಸಮುದಾಯದ ಮುಖಂಡರಾದ ಮಹಾದೇವ ಹಾದಿಮನಿ, ಚಂದ್ರಶೇಖರ ಚಲವಾದಿ, ಯಲ್ಲಪ್ಪ ಸಂಖ್ಯಾನವರ, ವಿವೇಕಾನಂದ ಗರಸಂಗಿ, ಹನಮಪ್ಪ ಚಲವಾದಿ, ಮನೋಹರ ಕದಮ, ಸಂಜೀವ ಐಹೊಳ್ಳಿ, ಶ್ರೀಧರ ಚಿಕ್ಕಲಕಿ, ಜಯವಂತ ಗುದಿಗೆನ್ನವರ, ರಾಜು ಮನ್ನಿಕೇರಿ ಸೇರಿದಂತೆ ಇತರರು ಉಪಸ್ಥಿತರಿದ್ದರು.

## ಪ್ರಾದೇಶಿಕ ಮಟ್ಟದ ಬೃಹತ್ ಉದ್ಯೋಗ ಮೇಳ

**ಕೊಪ್ಪಳ:** ಕರ್ನಾಟಕ ಕೌಶಲ್ಯ ಅಭಿವೃದ್ಧಿ ನಿಗಮದ ವತಿಯಿಂದ ಕರ್ನಾಟಕ ಭಾಗದಲ್ಲಿರುವ ಯುವಜನತೆಗಾಗಿ ಪ್ರಾದೇಶಿಕ ಮಟ್ಟದ ಬೃಹತ್ ಉದ್ಯೋಗಮೇಳ-2025ನ್ನು ಕಲಬುರಗಿಯಲ್ಲಿ ಆಯೋಜಿಸಲಾಗುತ್ತಿದ್ದು, ಆಸಕ್ತ ನಿರುದ್ಯೋಗಿ ಯುವ ಉದ್ಯೋಗಾಕಾಂಕ್ಷಿಗಳು ತಮ್ಮ ಹೆಸರನ್ನು ನೋಂದಾಯಿಸುವಂತೆ ಕೊಪ್ಪಳ ಜಿಲ್ಲಾ ಕೌಶಲ್ಯ ಮಿಷನ್ ಜಿಲ್ಲಾ ಕೌಶ್ಯಲ್ಯಾಭಿವೃದ್ಧಿ ಅಧಿಕಾರಿ ಗವಿಶಂಕರ್.ಕೆ ತಿಳಿಸಿದ್ದಾರೆ.

ಕಲ್ಯಾಣ ಕರ್ನಾಟಕ ಭಾಗದಲ್ಲಿ ರಾಜ್ಯದ ಯುವ ಜನತೆಗಾಗಿ ಕೌಶಲ್ಯದೊಂದಿಗೆ ಉದ್ಯೋಗವಕಾಶವನ್ನು ಕಲ್ಪಿಸುವ ಉದ್ದೇಶದಿಂದ ಕಲಬುರಗಿಯಲ್ಲಿ "ಪ್ರಾದೇಶಿಕ ಮಟ್ಟದ ಬೃಹತ್ ಉದ್ಯೋಗ ಮೇಳ"ವನ್ನು ಏಪ್ರಿಲ್-2025 ಮಾಹೆಯಲ್ಲಿ ಆಯೋಜಿಸಲು ವೈದ್ಯಕೀಯ ಶಿಕ್ಷಣ ಹಾಗೂ ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆ ಸಚಿವರು ಸೂಚಿಸಿರುತ್ತಾರೆ. ಈ ಹಿನ್ನೆಲೆಯಲ್ಲಿ ಕರ್ನಾಟಕ ಕೌಶಲ್ಯ ಅಭಿವೃದ್ಧಿ ನಿಗಮದ ವತಿಯಿಂದ ಕರ್ನಾಟಕ ಭಾಗದಲ್ಲಿರುವ ಯುವಜನತೆಗಾಗಿ ಪ್ರಾದೇಶಿಕ ಮಟ್ಟದ ಬೃಹತ್ ಉದ್ಯೋಗ ಮೇಳ-2025 ನ್ನು ಏಪ್ರಿಲ್-2025ರ ಮಾಹೆಯಲ್ಲಿ ಆಯೋಜಿಸಲು ಉದ್ದೇಶಿಸಿರುವುದರಿಂದ ಕಲ್ಯಾಣ ಕರ್ನಾಟಕ ಅಧೀನದಲ್ಲಿ ಬರವ 7 ಜಿಲ್ಲೆಗಳು ಹಾಗೂ ಇತರೆ ಜಿಲ್ಲೆಗಳಿಂದಲೂ ಅಂದಾಜು 20,000 ಕ್ಕೂ ಹೆಚ್ಚು ಉದ್ಯೋಗಾಕಾಂಕ್ಷಿಗಳು, 200 ಕ್ಕೂ ಹೆಚ್ಚು ಉದ್ಯೋಗದಾತರು ಭಾಗವಹಿಸುವ ನಿರೀಕ್ಷೆ ಇರುತ್ತದೆ.

ಕೊಪ್ಪಳ ಜಿಲ್ಲೆಯ ಎಲ್ಲಾ ತರಬೇತಿ ಪಡೆದು ಉದ್ಯೋಗ ಪಡೆಯದೆ ಇರುವಂತಹ ಎಲ್ಲಾ ನಿರುದ್ಯೋಗಿ ಯುವಕ-ಯುವತಿ ಉದ್ಯೋಗಾಕಾಂಕ್ಷಿಗಳಿಗೆ ಉದ್ಯೋಗ ಪಡೆಯಲು ಇದೊಂದು ಸುವರ್ಣ ಅವಕಾಶ ಆಗಿದ್ದು, ಕಲಬುರಗಿ ಇಲ್ಲಿ ಜರುಗುವ ಪ್ರಾದೇಶಿಕ ಮಟ್ಟದ ಬೃಹತ್ ಉದ್ಯೋಗ ಮೇಳದಲ್ಲಿ ಭಾಗವಹಿಸಲಿಚ್ಛೀಸುವ ಆಸಕ್ತರು ತಮ್ಮ ಸ್ವ-ವಿವರಗಳನ್ನು ದಾಖಲಿಸಿ https://udyogamela.skillconnect.kaushalkar.com/ext/form/53/1/apply ಲಿಂಕ್ ಮೂಲಕ ನೋಂದಾಯಿಸಿಕೊಳ್ಳಬಹುದಾಗಿದೆ. ಈ ಉದ್ಯೋಗ ಮೇಳದ ದಿನಾಂಕವನ್ನು ಮುಂದಿನ ದಿನಗಳಲ್ಲಿ ತಿಳಿಸಲಾಗುವುದು ಎಂದು ಪ್ರಕಟಣೆ ತಿಳಿಸಿದೆ.

## ಅಂತರಾಷ್ಟ್ರೀಯ ಮಹಿಳಾ ದಿನಾಚರಣೆ

## ತಾಯಿಯೇ ನಮ್ಮ ಕಣ್ಣಮುಂದಿನ ದೇವರು: ಡಿವೈಎಸ್ಪಿ ಮಲ್ಲೇಶ್ ದೊಡ್ಡಮನಿ



● ವಾರ್ತಾಲೋಕ ವಾರ್ತೆ

**ಕೂಡ್ಲಿಗಿ: ಮಾರ್ಚ್ 29 :** ಪ್ರತಿಫಲಾಪೇಕ್ಷೆ ಇಲ್ಲದೆ ನಿರಂತರವಾಗಿ ನಮ್ಮೆಲ್ಲರನ್ನು ಸಲಹುವ ತಾಯಿಯೇ ನಮ್ಮ ಕಣ್ಣಮುಂದಿನ ದೇವರು ಎಂದು ಕೂಡ್ಲಿಗಿ ಉಪ ವಿಭಾಗದ ಡಿವೈಎಸ್ಪಿ ಮಲ್ಲೇಶ್ ದೊಡ್ಡಮನಿ ಹೇಳಿದರು. ಪಟ್ಟಣದ ಪ್ರವಾಸಿ ಮಂದಿರದಲ್ಲಿ ಶುಕ್ರವಾರ ಕೂಡ್ಲಿಗಿ ಉಪ ವಿಭಾಗದ ವತಿಯಿಂದ ಅಂತರಾಷ್ಟ್ರೀಯ ಮಹಿಳಾ ದಿನಾಚರಣೆ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿದರು. ದೇವ ಸ್ವರೂಪಿಯಾದ ನಮ್ಮ ಹೆತ್ತ ತಾಯಿ ದಿನದ 24 ಗಂಟೆಗಳು ಕೂಡ ನಮ್ಮ ಬೆಳಸುವ ಹಾಗೂ ಕುಟುಂಬವನ್ನು ಸರಿಯಾಗಿ ನಡೆಸುವ ಮೂಲಕ ಸ್ತ್ರೀ ಸಮಾಜಕ್ಕೆ ಆದರ್ಶವಾಗಿದ್ದಾಳೆ. ಎಂದೂ ಕೂಡ ತಾನು ಮಾಡಿದ ಕಾರ್ಯಕ್ಕೆ ಪ್ರತಿಫಲ ಇಲ್ಲದೆ ನಿಸ್ವಾರ್ಥವಾಗಿ ತನ್ನ ಕುಟುಂಬದ ಸೌಖ್ಯಕ್ಕೆ ದುಡಿಯುವ ಮಹತಾಮಹಿ ಎಂದು ತಿಳಿಸಿದರು.

ಸಿಡಿಪಿಓ ಮಾಲುಂಭಿ ಮಾತನಾಡಿ, ಪ್ರತಿ ಯಶಸ್ವಿ ಮಹಿಳೆಯ ಹಿಂದೆ ಪುರುಷ ಇರುವುದು ಸತ್ಯ, ಪುರುಷರು ಮಹಿಳೆಗೆ ಪ್ರೋತ್ಸಾಹ ನೀಡದೇ ಹೋದರೆ ಯಾರೂ ಸಾಧನೆ ಮಾಡಲು ಅಸಾಧ್ಯ, ಅಕ್ಷರದವ್ವ ಸಾವಿತ್ರಿಬಾ ಫುಲೆ ಗೆ ಜ್ಯೋತಿಬಾ ಫುಲೆ ಬೆಂಬಲ ನೀಡದೇ ಹೋಗಿದ್ದಾರೆ ಮಹಿಳೆಯರು ಅಂದಿನ ಕಾಲದಲ್ಲಿ ಶಿಕ್ಷಣದಿಂದ ವಂಚಿತರಾಗುತ್ತಿದ್ದರು. ಗಂಡು ಮತ್ತು ಹೆಣ್ಣು ನಾಣ್ಯದ ಎರಡು ಮುಖಗಳು, ಪುರುಷ ಪ್ರಧಾನ ಸಮಾಜದಲ್ಲಿಯೂ ಸಹ ಇಂದು ಹೆಣ್ಣು ಎಲ್ಲಾ ರಂಗಗಳಲ್ಲಿ ಧುಮುಕಿ ಯಶಸ್ವಿಯಾಗಿ ತಾನು ಅಬಲೆಯಲ್ಲ ಸಬಲೆ ಎಂದು ಸಾಬಿತು ಪಡಿಸಿದ್ದಾಳೆ. ಭಾರತದಲ್ಲಿ ಹೆಣ್ಣು ತನ್ನ ಹಕ್ಕಿಗಾಗಿ ಎಂದು ಹೋರಾಟ ಮಾಡಿಲ್ಲ, ಸ್ತ್ರೀ ಸಮಾನತೆಗಾಗಿ ಸ್ವಾತಂತ್ರ್ಯ ಪೂರ್ವದಲ್ಲಿ ರಾಜರಾಮ್ ಮೋಹನ್ ರಾಯ ಸೇರಿದಂತೆ ಅನೇಕ ಮಹನೀಯರು ಸತಿ ಸಹಗಮನ ಪದ್ದತಿ ವಿರೋಧಿಸಿ ಸ್ತ್ರೀ ಸ್ವಾತಂತ್ರ್ಯಕ್ಕೆ ಹೋರಾಟ ಮಾಡಿರುವುದು ಈ ನೆಲದ ಸಂಸ್ಕೃತಿಯ ಎತ್ತಿ ತೋರಿಸುತ್ತದೆ. ಆದರೆ ಬೇರೆ ದೇಶಗಳಲ್ಲಿ ಹೆಣ್ಣು ತನ್ನ ಹಕ್ಕಿಗಾಗಿ ತಾನೇ ಹೋರಾಟ ಮಾಡಬೇಕಾದ ಪರಿಸ್ಥಿತಿ ಇದೆ ಎಂದು ತಿಳಿಸಿದರು. ಇದೇ ಸಂಧರ್ಭದಲ್ಲಿ ವಿವಿಧ ಕ್ಷೇತ್ರಗಳಲ್ಲಿ ಗಣನೀಯ ಸೇವೆ ಸಲ್ಲಿಸಿದ ಮಹನೀಯರನ್ನು ಉಪ ವಿಭಾಗದಿಂದ ಸನ್ಮಾನ ಮಾಡಲಾಯಿತು. ನಂತರ ಉಪ ವಿಭಾಗದ ಎಲ್ಲಾ ಮಹಿಳಾ ಪೋಲಿಸ್ ಸಿಬ್ಬಂದಿಗಳನ್ನು ಸನ್ಮಾನ ಮಾಡಿದರು.

ಪಪಂ ಅಧ್ಯಕ್ಷ ಕಾವಲಿ ಶಿವಪ್ಪನಾಯಕ, ಸಪಪೂ ಕಾಲೇಜು ಪ್ರಾಚಾರ್ಯೆ ಟಿ.ಕೊತ್ಲಮ್ಮ, ಹಗರಿ ಬೊಮ್ಮನಳ್ಳಿ ಸಿಪಿಐ ವಿಕಾಸ್ ಲಮಾಣಿ, ಕೊಟ್ಟೂರು ಸಿಪಿಐ ವೆಂಕಟಸ್ವಾಮಿ, ಪಿಎಸ್ಐ ಗೀತಾಂಜಲಿ ಶಿಂಧೆ, ಪಪಂ ಆರೋಗ್ಯ ನಿರೀಕ್ಷಕಿ ಗೀತಾ, ಪೋಲಿಸ್ ಸಿಬ್ಬಂದಿಗಳಾದ ಸುಮಾ, ಮಹಾಲಕ್ಷ್ಮಿ, ಟಿ.ಕೊಟ್ರೇಶ್, ಸ್ವರೂಪನಂದಾ, ಭಾಷಾ ಸೇರಿದಂತೆ ಅನೇಕರು ಇದ್ದರು.

**ವರದಿ ಹೆಚ್ಚು ವೀರಣ್ಣ**

VARTHA LOKA Kannada Daily Morning News Paper Printed at NIKHIL OFFSET PRINTES Ward No. 23, Buddha Circle, Hosalli Main Road, GANGAVATHI-583227. Dist: Koppal,
Editor & Published by Mohammed jeelan. G., Rajasab Compound, Opp. Kulayappa Building, 1st Cross, Patel Nagar, HOSPET Dist : Vijaynagar, Mob. No.: 9482156289 E-Mail: Varthalokahpt@gmail.com

Designed by MKG-9535762618